₹ 5/-

ನೇಸರು

ತಿಂಗಳೋಲೆ

PAGES 20

JANUARY 2026 Nesaru Tingalole Vol. XLIV - 01

ಕಾನಡಾ ವಿಠಲ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

ನೂತನ ವರ್ಷ 2026ಕ್ಕೆ ಸ್ವಾಗತ

ಪ್ರತಿ ವರ್ಷದಂತೆ ಈ ವರ್ಷವೂ (2025) ವರ್ಷಾಂತ್ಯದ ದಿನವಾದ ಡಿಸೆಂಬರ್ 31ರಂದು ಮೈಸೂರು ಅಸೋಸಿಯೇಷನ್ ನಲ್ಲಿ ಹೊಸ ವರ್ಷ 2026 ನ್ನು ಸ್ವಾಗತಿಸಲು ಎಲ್ಲ ಸಿದ್ಧತೆಗಳಾಗಿದ್ದವು. ಅಂದು ಸಂಜೆ 7.30 ಕ್ಕೆ ಮೊದಲಿಗೆ ಅಸೋಸಿಯೇಷನ್ ಗಣಪತಿಗೆ ಅಷ್ಟೋತ್ತರ ಶತನಾಮ ಪೂಜೆ ಸಲ್ಲಿಸಿ ಮಂಗಳಾರತಿ ಮಾಡಲಾಯಿತು. ಅಷ್ಟರಲ್ಲಿ ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಸುಮಾರು ಸದಸ್ಯರು ಒಟ್ಟುಗೂಡಿದ್ದರು. ಎಲ್ಲರೂ ಪ್ರಸಾದ ಸ್ವೀಕರಿಸಿ ಕಾಫಿ ಕುಡಿದು ಮೊದಲ ಮಹಡಿಯ ಸಭಾಗೃಹದಲ್ಲಿ ಸೇರಿದರು. 10–15 ಹೊಸ ಸದಸ್ಯರು ಮೊದಲ ಬಾರಿಗೆ ಅಸೋಸಿಯೇಷನ್ನಿನ ಕಾರ್ಯಕ್ರಮಕ್ಕೆ ಹಾಜರಾದರು. ಮೊದಲಿಗೆ ಶ್ಯಾಮಲಾ ರಾಧೇಶ್ ಗಣಪತಿ ಪ್ರಾರ್ಥನೆ ಸಲ್ಲಿಸಿದರು. ಅನಂತರ ಅಸೋಸಿಯೇಷನ್‌ನ ಅಧ್ಯಕ್ಷೆ ಕಮಾಲಾರವರು ಎಲ್ಲರನ್ನೂ ಬರಮಾಡಿಕೊಂಡು ಈ ಶತಮಾನೋತ್ಸವ ಸಂದರ್ಭದಲ್ಲಿ ಆಗಿರುವ ಕಾರ್ಯಗಳ ವಿವರ ನೀಡಿ ಮುಂದಿನ ಕಾರ್ಯಕ್ರಮಗಳಿಗೆ ಸದಸ್ಯರ ಸಹಕಾರ ಕೋರಿದರು ಮತ್ತು ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿದರು. ನಂತರದ ಕಾರ್ಯಕ್ರಮವನ್ನು ಶ್ರೀ ಶಶಿಕಾಂತ್ ಜೋಷಿಯವರು ನಿರ್ವಹಿಸಿದರು. ಅವರು ಅಂದು ಕನ್ನಡ ರಾಜ್ಯೋತ್ಸವದ ಅಂಗವಾಗಿ ಒಂದು ಕನ್ನಡ ಗೀತೆಯನ್ನೂ ಹಾಡಿದರು. ನಂತರ ಭವಾನಿ, ಶೀಲಾ ಮತ್ತು ಲಕ್ಷ್ಮಿ ಸೇರಿ ಒಂದು ಚೀಟಿ ಎತ್ತುವ ಆಟದ ಮುಖಾಂತರ ಬಂದಿದ್ದ ಸದಸ್ಯರ ಪರಿಚಯ ಮಾಡಿಸಿದರು.

ಅಂದಿನ ವಿಶೇಷ ಆಕರ್ಷಣೆ ಕನ್ನಡ ಚಲನಚಿತ್ರಗಳ ಆಧಾರಿತ ಪ್ರಶ್ನೋತ್ತರ ದೃಶ್ಯ ಕಾವ್ಯಗಳ ಸಂಗಮ, ನೋಡ ನೋಡುತ್ತಾ ಹೆಚ್ಚಿನ ಹಿರಿಯ ತಲೆಗಳೆಲ್ಲಾ ತಮ್ಮ ಯೌವ್ವನದ ದಿನಕ್ಕೆ ಜಾರಿ ಅತ್ಯುತ್ಸಾಹದಿಂದ ಭಾಗವಹಿಸಿದರು. ಹಾಗೆಂದು ಕಿರಿಯರೇನೂ ಹಿಂದೆ ಬೀಳಲಿಲ್ಲ. ಒಟ್ಟಿನಲ್ಲಿ ಜಿದ್ದಾಜಿದ್ದಿನಲ್ಲಿ ಯಾರೂ ಯಾರಿಗೂ ಕಡಿಮೆ ಇಲ್ಲ ಎಂಬುದು ಸಾಬಿತಾಯಿತು. ಜೊತೆಗೊಂದು ಪ್ರಶ್ನಾವಳಿ ಕನ್ನಡ ರಾಜ್ಯದ ಸಾಹಿತ್ಯ, ಕಲೆ, ಹಾಗೂ ನಾಡಿನ ವೈಭವದ ಕೊಡುಗೆಯ ಮೇಲೆ ನಡೆಯಿತು. ಇದೂ ಸಹ ಎಲ್ಲರಿಗೂ ಇಷ್ಟವಾಯಿತು. ಹೊಸಬರಲ್ಲದ ಹೊಸ ಸದಸ್ಯೆ ನಳಿನಿ ರಾವ್ ಒಂದು ಪುರಂದರದಾಸರ ಪದ ಸುಶ್ರಾವ್ಯವಾಗಿ ಹಾಡಿ ಎಲ್ಲರ ಮೆಚ್ಚುಗೆ ಗಳಿಸಿದರು. ಮಧ್ಯೆ ಊಟದ ವಿರಾಮ ಪುಷ್ಕಳ ಭೋಜನ ರಸವತ್ತಾದ ಅಡುಗೆ ಉಂಡು ಎಲ್ಲ ಮತ್ತೆ ಆಟದ ಮನೆಗೆ ಹಾಜರು. ಆ ನಂತರ ಹೌಸಿ ಆಟವನ್ನು ಅಡಿದೆವು. ಇದು ಸುಮಾರು ಮುಕ್ಕಾಲು ತಾಸು ನಡೆಯಿತು. 'ಸಿಕ್ಕವರಿಗೆ ಸೀರುಂಡೇ' ಅಂತ ಗೆದ್ದವರು ಬೀಗಿದರು. ರಾತ್ರಿ 12.00 ಹೊಡೆಯುವಾಗ ಮತ್ತೆ ಕೆಳಗೆ ಬಂದು ಗಣಪನಿಗೆ ಮಂಗಳಾರತಿ ಎತ್ತಿ ಹೊಸವರ್ಷದಲ್ಲಿ ಎಲ್ಲರಿಗೂ ಶುಭವಾಗಲಿ ಎಂದು ಬೇಡಿಕೊಂಡು ಸಂತೋಷದಿಂದ ಮನೆ ಸೇರಿದರು.

ಸಂಪುಟ 44 ಜನವರಿ 2026 ಸಂಚಿಕೆ 01

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್

❖ ❖ ❖

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

ಕರ್ಮದೊಂದಿಗಿನ ನಮ್ಮ ನಂಟು

ಡಾ. ಜ್ಯೋತಿ ಸತೀಶ್

ಜೀವನದಲ್ಲಿ ಅಶಾಂತಿ ಅನಿಸಿದಾಗ, ಒಮ್ಮೆ ಕಣ್ಣುಮುಚ್ಚಿ ಶ್ರೀಕೃಷ್ಣನನ್ನು ನೆನೆದಾಗ ಮನಸ್ಸಿಗೆ ಒಂದು ರೀತಿಯ ನಿರಾಳತೆ ಸಿಗುತ್ತದೆ. ಕೃಷ್ಣನ ಉಪದೇಶಗಳು ನಮ್ಮ ಜೀವನಕ್ಕೆ ಮಾರ್ಗದರ್ಶನ ನೀಡುವಂತಹ ಅನೇಕ ಅಮೃತವಾಣಿಗಳಿಂದ ಕೂಡಿದೆ."ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ" ಅಂದ್ರೆ "ನೀನು ಕರ್ಮ ಮಾಡುವ ಅಧಿಕಾರ ಹೊಂದಿದ್ದೀಯೆ, ಆದರೆ ಫಲದ ಬಗ್ಗೆ ನಿರೀಕ್ಷೆ ಇಡಬೇಡ." ಎಂದು ಹೇಳಿದ್ದಾನೆ ಶ್ರೀಕೃಷ್ಣ. ಈ ಸಂದರ್ಭದಲ್ಲಿ ಪುರಂದರ ದಾಸರ ದಾಸವಾಣಿ ನೆನಪಾಗುತ್ತದೆ.

"ನಮ್ಮ ಮೆಚ್ಚಿನವರು ನಮ್ಮವರು ಅಲ್ಲ
ನಮ್ಮವರು ನಮ್ಮ ಮೆಚ್ಚಿನವರು ಅಲ್ಲ
ನಮ್ಮ ಕರ್ಮವೇ ನಮ್ಮ ಬಂಧು
ನಮ್ಮ ಕರ್ಮವೇ ನಮ್ಮ ಗತಿ"

ನಾವು ಮೆಚ್ಚುವವರು ನಮ್ಮವರು ಅಲ್ಲ. ನಮ್ಮ ಕರ್ಮವೇ ನಮ್ಮ ನಿಜವಾದ ಸಂಬಂಧ ಮತ್ತು ಗತಿ ಎನ್ನುವುದನ್ನು ಸಾರಿ ಹೇಳಿದ್ದಾರೆ.

"ಪಾಲಿಗೆ ಬಂದದ್ದು ಪಂಚಾಮೃತ" ಅಂತ ಹಿರಿಯರು ಹೇಳಿ ಹೋಗಿದ್ದಾರೆ. ಆದರೆ ನಾವು ಇವತ್ತಿಗೂ ಅದನ್ನು ಪಾಲಿಸುತ್ತಿಲ್ಲ. ಬಹುಶಃ ಇದನ್ನು ಪಾಲಿಸಿದರೆ ನಮ್ಮಷ್ಟು ಸುಖಿಗಳು ಮತ್ಯಾರು ಇಲ್ಲ ಎಂದೇ ಹೇಳಬಹುದು. ಪ್ರಾಪ್ತವಾದುದರಲ್ಲಿ ಸಂತುಷ್ಟಿ ಎಂಬುದೇ ಇಲ್ಲ. ಮತ್ತಷ್ಟು ಬೇಕೆಂಬ ದಾಹ. ಅತೃಪ್ತಿ ಎಂದಿಗೂ ತೃಪ್ತಿಯನ್ನು ಕೊಡದು ಎನ್ನುವುದನ್ನು ನಾವು ಮರೆತಿದ್ದೇವೆ. ಮೂರು ದಿನದ ಬದುಕಿಗಾಗಿ ನಮ್ಮಲ್ಲಿ ಎಷ್ಟೊಂದು ಹರಸಾಹಸ. ಇನ್ನೊಬ್ಬರನ್ನು ತುಳಿದಾದರೂ ಮೇಲೇರಬೇಕೆಂಬ ಧಾವಂತ. ನಾವು ಏನೇ ಕೆಲಸ ಮಾಡುವ ಮೊದಲು ನಮ್ಮ ಮನಸ್ಸು ನಮ್ಮನ್ನು ಎಚ್ಚರಿಸುತ್ತದೆ. ನೀನು ಮಾಡುತ್ತಿರುವುದು ತಪ್ಪೋ? ಸರಿಯೋ ? ಅನ್ನೋದನ್ನ ಮನಸ್ಸು ಮೊದಲೇ ನಮಗೆ ತಿಳಿಸಿಕೊಡುತ್ತದೆ. ಆದರೆ ನಮ್ಮ ಲಕ್ಷ್ಯ ಆ ಕಡೆಗಿರುವುದಿಲ್ಲ. ಮೇಲೇರಬೇಕೆಂಬ ತವಕ ನಮ್ಮನ್ನ ಕುರುಡರನ್ನಾಗಿ ಮಾಡುತ್ತದೆ. ಎಲ್ಲಿಗೆ ಈ ಓಟ? ಒಂದಲ್ಲ ಒಂದು ದಿನ ಈ ಓಟಕ್ಕೆ ಕಡಿವಾಣ ಬೀಳಬಹುದಲ್ಲವೇ? ಇನ್ನೊಬ್ಬರಿಗೆ ಹಾನಿಯಾಗದ ಹಾಗೆ ನಡೆದುಕೊಂಡು, ನಿಧಾನವಾಗಿಯಾದರೂ ಪರವಾಗಿಲ್ಲ, ನಮ್ಮ ಗುರಿಯನ್ನು ಸೇರುವುದಿದೆಯಲ್ಲ ಅದರಷ್ಟು ಸಂತೃಪ್ತಿ ಯಾವುದು ಇಲ್ಲ. ಬೇರೆಯವರ ಕಣ್ಣಿಗೆ ಮಣ್ಣೆರಚಬಹುದು. ಆದರೆ ಮೇಲೊಬ್ಬನಿದ್ದಾನಲ್ಲ ಅವನ ನೋಟದಿಂದ ಪಾರಾಗಲು ಸಾಧ್ಯವೇ ಇಲ್ಲ ಎಂದು, ಅಂದುಕೊಂಡು ಬಾಳಿದರೆ, ನಮ್ಮಿಂದ ಯಾವ ತಪ್ಪು ನಡೆಯುವುದಿಲ್ಲ.

ಕೃಷ್ಣ ಹೇಳಿದ ಮಾತುಗಳು ನಮಗೆ ಕರ್ಮ ಮಾಡುವುದನ್ನು ಪ್ರೇರೇಪಿಸುತ್ತದೆ. ನಮ್ಮ ಇಷ್ಟದ ಕಾಯಕ ಮಾಡುವುದರಿಂದ ಮನಸ್ಸಿಗೆ ಸಂತೃಪ್ತಿ ಮತ್ತು ಸಮಾಧಾನ ಸಿಗುತ್ತದೆ. ಒಂದು ರೀತಿಯಲ್ಲಿ ಆಂತರಿಕ ಶಾಂತಿ ಸಿಗುತ್ತದೆ. ನಮ್ಮ ನಡುವೆ ಇರುವ ಸಂಬಂಧಗಳಲ್ಲಿ ಸುಧಾರಣೆ ಆಗುವುದರ ಮುಖೇನ ನಮ್ಮ ಜೀವನಕ್ಕೆ ಸ್ಪಷ್ಟತೆ ಸಿಗುತ್ತದೆ.

ನಿಜವಾದ ಬಾಳ್ವೆ ಬಾಳಬೇಕಾದರೆ, ಜೀವನದಲ್ಲಿ ಸಮತೋಲನ ಕಾಪಾಡಿಕೊಳ್ಳಬೇಕು. ಕೆಲಸ, ಕುಟುಂಬ, ಸ್ನೇಹಿತರು, ಸ್ವಯಂ ಅಭಿವೃದ್ಧಿ – ಎಲ್ಲದರಲ್ಲೂ ಸಮತೋಲನ ಇರಬೇಕು. ಧನಾತ್ಮಕ ಮನೋಭಾವದಿಂದ ಜೀವನವನ್ನು ಎದುರಿಸಬೇಕು. ಸಮಸ್ಯೆಗಳನ್ನು ಅವಕಾಶಗಳಾಗಿ ನೋಡಬೇಕು. ತಪ್ಪುಗಳಿಂದ ಕಲಿಯಬೇಕು. ಸೋಲೇ ಗೆಲುವಿನ ಸೋಪಾಲನವಲ್ಲವೇ?.

ನಮ್ಮ ಜೀವನ ಹೇಗಿರಬೇಕೆಂದರೆ, ಸರಳ, ಸತ್ಯ ಮತ್ತು ಸ್ವಾಭಿಮಾನದಿಂದ ಕೂಡಿರಬೇಕು. ನಮ್ಮೊಳಗೆ ಕಲಿಕೆ ನಿರಂತರವಾಗಿರಬೇಕು. ನಮ್ಮ ಬದುಕು ಪ್ರತಿಕ್ಷಣವೂ ಹೊಸ ಹೊಸ ಪಾಠಗಳನ್ನು ಕಲಿಸುತ್ತಿರುತ್ತದೆ. ಆ ಪಾಠಗಳನ್ನು ಮನನ ಮಾಡುತ್ತಾ ತನ್ನನ್ನು ತಾನು ಅಭಿವೃದ್ಧಿಪಡಿಸಿಕೊಳ್ಳಬೇಕು.

ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ "ನಿನ್ನಲ್ಲಿ ನೀನು ನಂಬಿಕೆ ಇಡು" ಇದನ್ನು ನಾವು ನಮ್ಮ ಜೀವನದಲ್ಲಿ ಮರೆಯಬಾರದು. ನಮ್ಮ ಮೇಲೆ ನಮಗೇ ನಂಬಿಕೆ ಇಲ್ಲದಿದ್ದರೆ, ಬೇರೆಯವರು ನಂಬಿಕೆ ಇಡಲು ಸಾಧ್ಯವೇ? ಮೊದಲು ನಮ್ಮನ್ನು ನಾವು ಗಟ್ಟಿಮಾಡಿಕೊಳ್ಳಬೇಕು. ಮತ್ತೆ ಬೇರೆಲ್ಲದರ ಕಡೆ ಗಮನಹರಿಸಬೇಕು.

ಪ್ರವಾಸ ವೈವಿಧ್ಯ
ಕನಸು ನನಸಾಗಿಸಿದ ಯೂರೋಪು ಪ್ರವಾಸ

✍ ಡಾ. ಸುಮಾ ದ್ವಾರಕಾನಾಥ್

ನನ್ನ ಗೆಳತಿ ಭವಾನಿ ಹೇಳಿದ ಹಾಗೆ ಎಲ್ಲರಿಗೂ ತಮ್ಮಂದಿರು ಇದ್ದರೂ, ಪ್ರಹ್ಲಾದ ನಂತಹ ತಮ್ಮಂದಿರು ಅಪರೂಪ. ಹೊಸ ಕಾರೇನೋ ತೊಗೊಬಹುದು ಆದರೆ, ನಾವೆಲ್ಲರೂ enjoy ಮಾಡುವ ಕಾಲದಲ್ಲಿ ಮಾಡಬೇಕು. ಎಂದು decide ಮಾಡಿ ವಿದೇಶ ಪ್ರವಾಸ ಮಾಡಲು ನಿರ್ಧರಿಸಿದ. ನಮ್ಮ ಮನೆ middle class ಆದರೂ, ನಾನೊಬ್ಬಳು comfort zone ನಲ್ಲಿದ್ದರೆ, ತಮ್ಮ, ತಂಗಿ luxury afford ಮಾಡಬಹುದಾಗಿತ್ತು. ಹಾಗಾಗಿ ನನ್ನನ್ನೂ ಸೇರಿಸಿ ಹೊರಟರು. ಶುರುವಾಯಿತು ನಮ್ಮ ತಯಾರಿ. ನಾನು ಇಲ್ಲಿಂದಲೇ ಕೇಸರಿ ಟೂರ್ಸ್‌ನಲ್ಲಿ ಫಾರ್ಮ್ ತುಂಬಿಸಿ ಶೆಂಗುನ್ ವೀಸಾಗೂ ಹೋಗಿಬಂದೆ. ನನ್ನ ಅಕೌಂಟ್‌ನಲ್ಲಿ 2 ಲಕ್ಷ ಇರಬೇಕಾಗಿತ್ತು. F. D. certificate ಮಗನ ಸುಪರ್ದಿನಲ್ಲಿತ್ತು ಅದು ಸಿಗದೆ, ಮೂರು ದಿನ ಒದ್ದಾಡಿದೆ. ಕೊನೆಗಂತೂ ಅವನ folders ಎಲ್ಲಾ ತಡಕಾಡಿದ ಮೇಲೆ ಸಿಕ್ಕಿತು. ಎಲ್ಲಾ formalities ಮುಗಿಸಿ ಬೆಂಗಳೂರಿಂದ ನಾವು ಏಳು ಜನ ಹೊರೆಟೆವು. ಹೊರಡುವ ಮುಂಚೆ ಒಂದು ಮೀಟಿಂಗ್ ಕರೆದು ಒಂದು backsack ಕೊಟ್ಟರು. ಪ್ರಶಾಂತ್ ನಮ್ಮ ಟೂರ್ ಗೈಡ್ ಆಗಿದ್ದ. ರಾತ್ರಿ 2.30ಗೆ ನಮ್ಮ flight ಬುಕ್ ಆಗಿತ್ತು. ಅಲ್ಲಿ ನಮಗೆಲ್ಲರಿಗೂ ಒಂದೊಂದು ಕೆಜಿಯ chats, ಕಾಫಿ ಮೇಕರ್ ಕೊಟ್ಟರು. 16 ಗಂಟೆಯ ಪ್ರವಾಸ, transit , abudhabi ಯಲ್ಲಿತ್ತು. ನಾವು fresh ಆಗಿ, terminal ಬದಲಾಯಿಸುವುದರೊಳಗೆ, luggage transfer ಆಗಿತ್ತು. ಇಂಗ್ಲೆಂಡಿನ ಹೀಥ್ರೂ ಏರ್ ಪೋರ್ಟ್ ತಲುಪಿದಾಗ ಮಧ್ಯಾಹ್ನ 3 ಗಂಟೆ. ಅಲ್ಲೋ ಎಲ್ಲಾ counter ನಲ್ಲೂ ಬರೀ ನೀಗ್ರೋಸ್. ಮೊದಲ ಸಲವಾದ್ರಿಂದ ನಮಗೆಲ್ಲಾ ಒಂದು ತರದ ಆತಂಕ ಅಂತೂ ಗೈಡ್ ಸಹಾಯದಿಂದ ಹೊರಬಂದೆವು. ಊರಹೊರಗಿನ ಒಂದು ಹೋಟೆಲ್ 'ಹಾಲಿಡೆ ಇನ್'ನಲ್ಲಿ ನಮ್ಮನ್ನು ಇಳಿಸಿದರು. ಅಲ್ಲೇ ವಾಸವಾಗಿದ್ದ ನನ್ನ ಕಸಿನ್ ಗಂಡ, ಹೆಂಡತಿ ನಮ್ಮನ್ನು ನೋಡಲು ಬರುವವರಿದ್ದರು. ಮಾರನೆದಿನದಿಂದ ನಮ್ಮ sightseeing trip ಇದ್ದುದರಿಂದ ಅವತ್ತೇ ಬಂದರು. ನಾವೆಲ್ಲಾ ನಮ್ಮ ರೂಮಿನಲ್ಲೇ ಹರಟುತ್ತಾ ಇರುವಾಗ, ಪ್ರಹ್ಲಾದ ಓಡಿ ಬಂದ. ಅವನು, ಅವನ ರೂಮಿನ ಬಾಗಿಲು ತೆಗೆದರೆ ಒಳಗಿಂದ ಒಬ್ಬ ಸೂಟುಧಾರಿ ಹೊರಬಂದದ್ದನ್ನು ಹೇಳಿದ. ತಕ್ಷಣ ನಾವೆಲ್ಲಾ ಅವನ ಹಿಂದೆ ಓಡಿ ಹೋದೆವು. corridorನಲ್ಲಿ ಓಡಾಡುವವರೆಲ್ಲಾ ಸೂಟು ಧಾರಿಗಳೇ ಆದ್ರಿಂದ ಅವನು ತಿರುತಿರುಗಿ ನೋಡುತ್ತಲೇ ನಿಧಾನವಾಗಿ ಮುಂದೆ ಮುಂದೆ ಹೊರಟುಹೋದ. ಅವನನ್ನು ಹಿಡಿಯುವ ಧೈರ್ಯ ನಮಗಾಗಲಿಲ್ಲ. ರೂಮಿಗೆ ಹೋಗಿ ಏನು ಕಳೆದಿದೆಯೋ ನೋಡಿದೆವು. ಪುಣ್ಯಕ್ಕೆ ಎಲ್ಲಾ ಹಾಗೇ ಇತ್ತು. 'ಎಲ್ರೂ ಮಾತಾಡಬೇಡಿ, ನಾನೊಬ್ಬಳೇ ಮಾತಾಡುತ್ತೇನೆ' ಎಂದು ನನ್ನ ಕಸಿನ್ reception ಗೆ ಹೋದಳು. ಅವಳ ಹಿಂದೆ ನಾವೆಲ್ಲಾ ಹೋದೆವು. ಮತ್ತೆಲ್ಲಾದರೂ ಅವನು ಬಂದಾನೆಂದು ರೂಮು ಬದಲಾಯಿಸಿಕೊಡಿ ಎಂದು ಕೇಳಿದೆವು. 'ಮೊದಲ ಚುಂಬನ ದಂತಭಗ್ನ' ಅನ್ನುವ ಹಾಗೆ ಸ್ವಲ್ಪ ನಿರಾಸೆ ಆಯಿತು. ನಮಗೆ ಮೊದಲೇ instruction ಕೊಟ್ಟ ಹಾಗೆ ನಾವೆಲ್ಲರೂ passport, mobile, ಗಳನ್ನು travels ನವರು ಕೊಟ್ಟಿದ್ದರ ಬ್ಯಾಗ್‌ನಲ್ಲೇ ಹಾಕಿ ಮುಂದುಗಡೆ ಹಾರದ ತರಹ ಧರಿಸಿಬಿಟ್ಟಿದ್ದೆವು. ಅದನ್ನು ಸ್ನಾನ ಮಾಡುವ ಹೊತ್ತಿನಲ್ಲಿ ಮಾತ್ರ ಬಚ್ಚಲು ಮನೆಯಲ್ಲೇ ತೂಗು ಹಾಕುತ್ತಿದ್ದೆವು.

ಸ್ನಾನದ ಫಜೀತಿಯಂತೂ ಹೇಳುವುದೇ ಬೇಡ, tubನಲ್ಲಿ ಮಾಡಲಾಗದೆ ಈಚೆಯೇ ಸ್ನಾನ ಮಾಡಿ ನೀರೆಲ್ಲಾ ಹೊರಗೆ ಬರುವ ಹಾಗೆ ಮಾಡುತ್ತಿದ್ದೆವು. ಆದರೆ ನಾವು ಟೂರ್ ಮುಗಿಸಿ ಬರುವಾಗ ರೂಮ್ clean ಆಗಿ ಇರುತ್ತಿತ್ತು. ನಮಗೇ ನಾಚಿಕೆಯಾಗಿ ಮುಂದೆ ಸರಿಪಡಿಸಿಕೊಂಡೆವು.

ಮೂರು ದಿನ ಊರು ನೋಡಲು ಹೋಗಿದ್ದೆವು. ವಿಕ್ಟೋರಿಯಾ ಮ್ಯೂಸಿಯಮ್ ನೋಡಿ, madam tussauds (ಮೇಣದ ಮೂರ್ತಿಗಳಿರುವ) ನೋಡಲು ಹೋದಾಗ ಇನ್ನೊಂದು ಅವಘಡವಾಯ್ತು. ನಾವು ಕೆಲವೊಂದಿಷ್ಟು ಜನ, ಸಿಂಗಪುರ್‌ನಲ್ಲಿ ನೋಡಿದ್ದರಿಂದ ಬಸ್‌ನಲ್ಲೇ ಕುಳಿತೆವು. ಇನ್ನು ಕೆಲವರು, ಖರೀದಿಗೆಂದು ಅಲ್ಲೇ ಇದ್ದ ಅಂಗಡಿಗಳಿಗೆ ಹೋದರು. ನನ್ನ ಕಸಿನ್ ತನ್ನ ಶೂ ಹಳೆಯದೆಂದು, ಹೊಸದನ್ನು ಕೊಳ್ಳಲು ಹೋದಳು. ಅರ್ಧ ಗಂಟೆಯ ಮೇಲೆ ಪೆಚ್ಚು ಮುಖ ಹಾಕಿ ಬಂದಳು. ವಿಷಯ ಏನೆಂದರೆ ಅವಳು ಕಾಲಿನ ಅಳತೆ ಕೊಡಲು ಕೂತಾಗ ಪಕ್ಕದಲ್ಲೇ ಇಟ್ಟಿದ್ದ ದುಡ್ಡು handbag ಅವಳಿಗೆ ಗೊತ್ತಿಲ್ಲದ ಹಾಗೆ ಎಗರಿಸಿದ್ದಾರೆ. ಅದರಲ್ಲಿ ಕ್ಯಾಮೆರ, ಮುಂತಾದ ವಸುಗಳಿದ್ದವಂತೆ ಎಷ್ಟು ಹುಡುಕಿದರೂ ಸಿಗಲಿಲ್ಲ. ಪುಣ್ಯಕ್ಕೆ ಪಾಸ್ ಪೋರ್ಟ್, ಮೊಬೈಲ್ ಬೇರೆ sling bagನಲ್ಲಿದ್ದುದರಿಂದ ಬಚಾವಾದಳು. ಕಳೆದುಹೋದ ವಸ್ತುವಿಗಾಗಿ ಎಷ್ಟು ಹಲುಬಿದರೂ ಪ್ರಯೋಜನವಾಗಲಿಲ್ಲ.

ಮುಂದೆ ಬಕಿಂಗ್ ಹ್ಯಾಮ್ ಅರಮನೆಯಲ್ಲಿ changing gaurds ನೋಡಲು ಹೋದರೆ, traffic jam ನಿಂದಾಗಿ ಆ ದೃಶ್ಯ ತಪ್ಪಿತು. ಬಸ್‌ನಲ್ಲೇ, ಕೋಹಿನೂರ್ ವಜ್ರ ಇರುವ ಮ್ಯೂಸಿಯಮ್, ಥೇಮ್ಸ್ ನದಿ, ಬಿಗ್ ಬೆನ್, ಟವರ್ ಬ್ರಿಡ್ಜ್, ಟ್ರಫಾಲ್ಗರ್ ಸ್ಕ್ವೇರ್, ಹೈಡ್ ಪಾರ್ಕ್, ವೆಸ್ಟ್ ಮಿನಿಸ್ಟರ್ ಆಬೆ, ನೋಡಿಕೊಂಡು, ಲಂಡನ್ ಐ ನೋಡಲು ಹೋದೆವು. ಮೊದಲು ಭಯವಾದರೂ ಅದರ ಸುತ್ತುವಿಕೆ ನಿಧಾನವಾದ್ದರಿಂದ ಮನಸೆಳೆಯುವ ನೋಟ ನೋಡಲು ಸಾಧ್ಯವಾಯಿತು.

ಮೂರನೆಯ ದಿನ ನಾವು ಬುಲೆಟ್ ಟ್ರೈನ್‌ನಲ್ಲಿ ಫ್ರಾನ್ಸ್‌ಗೆ ಹೋಗಬೇಕಾಗಿತ್ತು. ಮೂರೇ ನಿಮಿಷ ನಿಲ್ಲುವುದರಿಂದ ನಾವೆಲ್ಲಾ ಬೇಗ ಹತ್ತಬೇಕಾಗಿತ್ತು. ಗಂಡಸರೆಲ್ಲಾ ಸೇರಿ luggage ಅನ್ನು ಇನ್ನೊಂದು ಬಾಗಿಲಿನಿಂದ ಹಾಕಿದರು. ಅಂತೂ exitement ನಲ್ಲೆ ಹತ್ತಿ ಕುಳಿತೆವು. ಬಹುಶಃ 2–18 ನಿಮಿಷಗಳೊಳಗೆ ಗಂಟೆಗೆ 300 ಕಿ.ಮೀ. ನ ವೇಗದಲ್ಲಿ ಇಂಗ್ಲೀಷ್ ಕಾಲುವೆಯೊಳಗೆ ಸಾಗಿ ನಾವು ಪ್ಯಾರಿಸ್ ತಲುಪಿದೆವು.

'ನೋವೋಟೆಲ್' ಎನ್ನುವ ಹೋಟೆಲ್ ನಲ್ಲಿ ನಮ್ಮ ವಾಸ್ತವ್ಯ. ಮಾರನೆಯ ಬೆಳಗ್ಗೆ, ಊರು ನೋಡಲು ಹೋದೆವು. ನನ್ನ ತಲೆಯೊಳಗೆ ಅಲ್ಲಿಯ ಕ್ರಾಂತಿ, ಗಿಲೋಟಿನ್ (ತಲೆ ಕತ್ತರಿಸುತ್ತಿದ್ದ ಎಲೆಕ್ಟ್ರಿಕ್ ಖುರ್ಚಿ) ಎಲ್ಲಾ ನೆನಪಿಗೆ ಬಂದರೆ, ನಮಗೆ ಕೆಲವು ರಾಷ್ಟ್ರೀಯ ಸ್ಮಾರಕಗಳನ್ನು ಮಾತ್ರ (senior citizen ಗಳೆಂದು) ತೋರಿಸಿದರು. ಲೂವ್ರೆ ಮ್ಯೂಸಿಯಮ್ ಅಂತೂ ದೂರದ ಮಾತಾಗಿತ್ತು. ಮುಖ್ಯವಾಗಿ ಪ್ಯಾರಿಸ್‌ನ icon ಎಫಿಲ್ ಟವರ್ ನೋಡಲು ಹೊರೆಟೆವು. ಎಲ್ಲ ಕಡೆ ಹನುಮಂತನ ಬಾಲದ ಕ್ಯೂ. ಸುಮಾರು 2 ಗಂಟೆ ಕಾಲ ನಿಂತು ಲಿಫ್ಟ್‌ಗೆ ಹೋದೆವು. ಗುಸ್ಟೇವ್ ಎಫಿಲ್ ಅನ್ನುವವನು 1889ನೆಯ ಇಸವಿಯಲ್ಲಿ 324 ಮೀ.ಎತ್ತರದ ಜಾಗತಿಕ ಜಾತ್ರೆಗಾಗಿ ಕಟ್ಟಿಸಿದ್ದು. 3 ಲೆವೆಲ್ ಲಿಫ್ಟ್ ಇರುವ, ಟವರ್ 2 ಲೆವೆಲ್‌ಗಳಲ್ಲಿ ಹೋಟೆಲ್‌ಗಳನ್ನೂ ಹೊಂದಿದೆ. ಆ ಕಬ್ಬಿಣದ ಲಿಫ್ಟ್‌ಗಳೋ ಹೆದರಿಕೆ ಹುಟ್ಟಿಸಿದರೂ, ಛಲದಿಂದ ಮೇಲೆ ಹೋದೆವು. ಸುತ್ತಲಿನ ಕಾಲುವೆಗಳಿಂದ ಕೂಡಿದ ರಮಣೀಯ ದೃಶ್ಯವನ್ನು ನೋಡಲು ಎರಡು ಕಣ್ಣು ಸಾಲದಾಗಿತ್ತು. 'ಐರನ್ ಲೇಡಿ'ಯನ್ನು ರಾತ್ರಿಯ ಬೆಳಕಿನಲ್ಲಿ ಕಾಣಲು ಮತ್ತೆ ನಾವು ಕೆಲವರು ಹೋದೆವು. ಪ್ಯಾರಿಸ್ ಹೆಸರೇ ಸೂಚಿಸುವಂತೆ ಫ್ಯಾಷನ್ ಮತ್ತು ಚಿತ್ರಕಲೆಗೆ ಹೆಸರಾದ್ದದು. ಚರಿತ್ರೆಯಲ್ಲಿ ಓದಿದ್ದನ್ನು ನೆನಪಿಸಿಕೊಳ್ಳುತ್ತಾ ಮುಂದಿನ ಪಯಣಕ್ಕೆ ಸಿದ್ದರಾದೆವು.

ಮುಂದಿನ ಪಯಣ ಸ್ವಿಟ್ಜರ್‌ಲೆಂಡ್. ನಮಗೆ ಆಶ್ಚರ್ಯವಾದುದೆಂದರೆ ಸುಮಾರು 50 ವರ್ಷದ ದಢೂತಿ ಹೆಂಗಸು ಬಸ್ ಡ್ರೈವ್ ಮಾಡಿದ್ದು. ಇಡೀ ದಿನ ಪಯಣಿಸಿ ದಾರಿಯ ಮಧ್ಯದಲ್ಲಿ ಒಂದು ಪೆಟ್ರೋಲ್ ಬಂಕ್‌ನ ಪಕ್ಕ ಇದ್ದ ಗಾರ್ಡನ್‌ನಲ್ಲಿ ಮಧ್ಯಾಹ್ನದ ಊಟ ಮುಗಿಸಿ ತಲುಪಿದ್ದು ಸಂಜೆಗೆ. ಹೋಟೆಲ್ 'ಬೆಲ್ಲೂವೆ'ಯಲ್ಲಿ ನಮ್ಮ ವಾಸ್ತವ್ಯ. ಅಲ್ಲಿಯ ಸ್ನಾನದ ಮನೆಗಳೋ ಗಾಜಿನ ಮನೆ, ನಮಗೋ ಸ್ನಾನ ಮಾಡಲೂ ಮುಜುಗರ. ಆದರೆ ಆ ಗಾಜುಗಳು ಹೊರಗಿನಿಂದ ಏನೂ ಕಾಣಿಸೊಲ್ಲ ಎನ್ನುವ ಭರವಸೆ. ತಿಂಡಿ ತಿಂದು ಹೊರಗೆ ಬಂದರೆ ಸ್ವಚ್ಛ ಹವೆ, ರಸ್ತೆಗಳೋ ನಿರ್ಜನ, ಸುತ್ತಲೂ alps range, ಹಾಗೇ ಒಂದು ರೌಂಡು ಹಾಕಿ ಬಂದೆವು. ಮೌಂಟ್ ಟಿಟ್ಲಿಸ್‌ಗೆ, ಕೇಬಲ್ ಕಾರ್‌ನಲ್ಲಿ ಹೋಗಬೇಕಾದ್ರಿಂದ ಸೀರೆ ಬದಲು ಡ್ರೆಸ್ ಹಾಕಿ ಎಲ್ರೂ ತಯಾರಾದೆವು. ಆ ಊರಲ್ಲೇ ಇದ್ದ ನನ್ನ ಕಸಿನ್ ತನ್ನ ಮಗನ ಜೊತೆ ಬಂದಳು. ಹೇಳಿದರೆ ಆಶ್ಚರ್ಯವಾಗುತ್ತೆ, ಅವಳು ಇವತ್ತು ಭಾರತ ರತ್ನ ಭೀಮಸೇನ ಜೋಶಿಯವರ ಅಣ್ಣನ ಮಗ ಇರಬೇಕು, ಅವರು alps ಬೆಟ್ಟದ ಮೇಲೆ ತೆರೆದಿರುವ restaurant ನಲ್ಲಿ ವಾರಕ್ಕೊಂದು ದಿನ ಬಿಸಿಬೇಳೆಭಾತ್ ಮಾಡಿ ಕೊಡಲು ಹೋಗುತ್ತಾಳೆ. ಅಲ್ಲಿಯ ಕನ್ನಡದವರಿಗೆ ಮುಂದಾಳಾಗಿ ಸಹಾಯ ಮಾಡುತ್ತಾಳೆ.

ಅರ್ಧಚಂದ್ರಾಕೃತಿಯಲ್ಲಿರುವ alps, ಸುಮಾರು 8 ದೇಶಗಳನ್ನು ಆವರಿಸಿದೆ. ನಾವು ಲೂಸರ್ನ್ ಇಂದ ಏಂಜಲ್ ಬರ್ಗ್‌ಗೆ (ರೊಟೇರ್) ಎನ್ನುವ 2 ಕೇಬಲ್ ಕಾರ್‌ಗಳನ್ನು ಬದಲಾಯಿಸ ಬೇಕಾಯಿತು. 3238ಮೀ. ಎತ್ತರವಿರುವ ಹಿಮಾಚ್ಛಾದಿತ ಶಿಖರ. ಅಲ್ಲಿ 5000 ವರ್ಷದ ಹಳೆಯ glaciar ಗುಹೆಯನ್ನು ನೋಡಿದೆವು. ಅಲ್ಲಿ ವಿವಿಧ ಹಿಮಾಕೃತಿಗಳನ್ನು ಪ್ರದರ್ಶಿಸಿದ್ದರು. Tobogganing ಎನ್ನುವ ಉಯ್ಯಾಲೆಯಲ್ಲಿ ಕೆಳಗಿನ ಕಣಿವೆ ತನಕ ಡುಜಜ ಮಾಡಿದ್ದು ತುಂಬಾ ಮಜ ಬಂತು. ಜೀವನ ಸಾರ್ಥಕವೆನಿಸಿತು.

ಭಾರತೀಯರ ಇನ್ನೊಂದು ಅಲ್ಪತನವೆಂದರೆ, ಹೋಟೆಲ್‌ನಲ್ಲಿ ರಾತ್ರಿ ವಾಸ್ತವ್ಯವಿದ್ದರೆ, ಬೆಳಗ್ಗೆ complimentary ಎಂದು ಕೊಡುವ ವೈವಿಧ್ಯಮಯವಾದ breakfast ಆಕರ್ಷಣೆ. ಬಕಪಕ್ಷಿಗಳಂತೆ ಹೊಟ್ಟೆ ತುಂಬಾ ತಿಂದಿದ್ದಲ್ಲದೆ, ಅಲ್ಲಿ ಇಟ್ಟಿದ್ದ ಹಣ್ಣು, ಬೆಣ್ಣೆ, ಕೇಕ್ ಸಾಧ್ಯವಾದು ದಷ್ಟನ್ನೂ ಬ್ಯಾಗ್‌ನಲ್ಲಿ ತುಂಬಿಕೊಳ್ಳುವುದು. ಕೊನೆಕೊನೆಗೆ ಹೋಟೆಲ್ ನವರಿಗೆ ತಿಳಿದು, ಬಾಗಿಲಲ್ಲಿ ನಮ್ಮನ್ನು ಚೆಕ್ ಮಾಡಿ, ತಿಂಡಿ ಇದ್ದರೆ, ಇಲ್ಲೇ ತಿಂದು ಹೋಗಿ, ಇಲ್ಲದಿದ್ದರೆ counter ನಲ್ಲೇ ಇಡಿ ಎಂದು ನಯವಾಗಿ ಹೇಳಿ ಕಳಿಸುತ್ತಿದ್ದರು. ಅದು ನಮಗೆ ಅವಮಾನ ವೆನಿಸುತ್ತಿತ್ತು.

ಮುಂದಿನ ಪಯಣ ಆಸ್ಟ್ರಿಯಾ, ವೆನಿಸ್, ಮತ್ತು ರೋಮ್ ಮುಂದಿನ ಭಾಗದಲ್ಲಿ. ಅಲ್ಲೀವರೆಗೆ ಅಲ್ಪ ವಿರಾಮ.

SUNRISE CANDLES

ಸಂಗ್ರಹ : **ಶಶಿಕಾಂತ್ ಜೋಶಿ**

ನೀವು sunrise candles ಹೆಸರು ಕೇಳಿದ್ದೀರಾ ಅಥವಾ ಶ್ರೀ ಭಾವೇಶ್ ಭಾಟಿಯಾ ಅವರ ಹೆಸರನ್ನು ಕೇಳಿದ್ದೀರಾ ಅಥವಾ ಬೆಳಕು ಕೊಡುವ ಮೇಣದ ಬತ್ತಿ ಮತ್ತು ಮಾರಾಟ ಮಾಡಿದ ಒಬ್ಬ ಅಂಧವ್ಯಕ್ತಿ ಮೇಣದ ಸಾಮ್ರಾಜ್ಯವನ್ನು ಕಟ್ಟಿದ್ದಾರೆ ಅಂದರೆ ನಂಬುತ್ತೀರಾ? ಅದೂ ಅಲ್ಲದೆ ಒಬ್ಬ ಅಂಧ ವ್ಯಕ್ತಿ ತನ್ನ ಜೀವಮಾನದಲ್ಲಿ ಇಲ್ಲಿಯವರೆಗೆ 117 ಕ್ಕಿಂತಲೂ ಹೆಚ್ಚು Para Olympicನಲ್ಲಿ ಪದಕಗಳನ್ನು ಪಡೆದು ದೇಶದ ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆದಿದ್ದಾರೆ, ಅಂದರೆ ವಿಶ್ವಾಸವಿಡಬಹುದಲ್ಲವೇ? ಅವರೆ ಡಾ॥ ಭಾವೇಶ್ ಭಾಟಿಯಾ. ಇವರು ಮೂಲತಃ ಕಚ್ಛಿ ಗುಜರಾತಿ. ಮಹಾರಾಷ್ಟ್ರದ ಪ್ರಸಿದ್ಧ ತಂಪು ತಾಣವಾದ ಮಹಾಬಳೇಶ್ವರದವರು. ಇವರ ತಂದೆ ಕೆಲಸವನ್ನು ಅರಸುತ್ತ ಚಂದ್ರಪುರದಿಂದ ಬಂದು ಮಹಾಬಳೇಶ್ವರದಲ್ಲಿ estate manager ಆಗಿ ನೇಮಕಗೊಂಡರು. ಇರುವುದು ಎಸ್ಟೇಟ್‌ನ outhouse ನಲ್ಲಿ. ಮನೆಯ ಪರಿಸ್ಥಿತಿ ಅಷ್ಟಕಷ್ಟೆ. ಹಾಸಲು ಇದ್ದರೆ ಹೊದೆಯಲು ಇಲ್ಲ ಅಂತ ಪರಿಸ್ಥಿತಿಯಲ್ಲಿ ಇವರ ಜನನ. ಹುಟ್ಟುವಾಗಲೇ ಕಣ್ಣಿನ ನ್ಯೂನತೆ ಪಡೆದುಕೊಂಡು ಬಂದರು. ಕಾಣಿಸುತ್ತಿತ್ತು ಆದರೆ ಅಷ್ಟಾಗಿ ಇಲ್ಲ. ಕಂಡ ಕಂಡ ವೈದ್ಯರಿಂದ ಉಪಚಾರವೇನೂ ನಡೆಯುತ್ತಿತ್ತು, ಆದರೆ ಫಲಿತಾಂಶ ಉತ್ತೇಜನಕಾರಿ ಇರಲಿಲ್ಲ, ಅಲ್ಲದೆ ಕಾಲಕ್ರಮೇಣ ಈಗ ಇರುವಷ್ಟು ನೋಡುವ ಶಕ್ತಿಯೂ ಹೋಗುತ್ತದೆ ಮತ್ತು ಪೂರ್ಣ ಅಂಧನಾಗುತ್ತಾನೆ ಅಂತ ವೈದ್ಯರು ಹೇಳಿದರು. ಆದರೆ ಅವರ ತಾಯಿ ಎದೆಗುಂದಲಿಲ್ಲ. ಅವಳಿಗೆ ತಾನು ಕಲಿತಿಲ್ಲವಾದರೂ ಶಿಕ್ಷಣದ ಮಹತ್ವ ಗೊತ್ತಿತ್ತು. ಮಗುವನ್ನು ಶಾಲೆಗೆ ಕಳುಹಿಸಿದಳು. ಶಾಲೆಯಲ್ಲಿ ಇತರ ಮಕ್ಕಳು ಇವರನ್ನು ಹೀಯಾಳಿಸುತ್ತಿದ್ದರು. ಆಟಪಾಠಗಳಲ್ಲಿ ಇವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ತಾಯಿ ಅವರಿಗೆ ಧೈರ್ಯ ತುಂಬಿದಳು. ಅವಳಿಗೆ ಗೊತ್ತಿತ್ತು ಒಂದಲ್ಲ ಒಂದು ದಿನ ತನ್ನ ಮಗ ಪೂರ್ಣ ಅಂಧನಾಗುತ್ತಾನೆಂದು ಅದಕ್ಕೆ ಪ್ರತಿದಿನ ಮಗನಿಗೆ ಒಳ್ಳೆಯ ಉಪದೇಶಗಳನ್ನು ಮಾಡುತ್ತಾ ಒಳ್ಳೆಯ ಕೆಲಸವನ್ನು ಮಾಡಲು ಪ್ರೇರೇಪಿಸುತ್ತಿದ್ದಳು. ಅವಳ ಬೀಜಮಂತ್ರ ಒಂದೇ "ಭಾವೇಶ ನೀನು ಜಗತ್ತನ್ನು ನೋಡಲಿಕ್ಕೆ ಆಗಲಿಲ್ಲವಾದರೂ ಜಗತ್ತೇ ನಿನ್ನನ್ನು ನೋಡುವ ಹಾಗೆ ಮಾಡು".

ಇದು ಅವರ ಮನಸ್ಸಿನಲ್ಲಿ ಕೊರೆದ ಹಾಗೆ ಮೂಡಿತು. ಯಾವುದೇ ತೊಂದರೆ ಬಂದರೂ ಎದೆಗುಂದಬಾರದು ಹಾಗು ಅದನ್ನು ಧೈರ್ಯದಿಂದ ಎದುರಿಸಬೇಕು ಎಂದು ಹೇಳುತ್ತಾ ಇದ್ದಳು. ಅವಳು ಮಾನಸಿಕ ಧೈರ್ಯದ ಜೊತೆಗೆ ದೇಹದ ಸ್ವಾಸ್ಥ್ಯ ಬಗ್ಗೆಯೂ ಗಮನ ಹರಿಸಬೇಕೆಂದು ಪ್ರೇರೇಪಿಸಿದಳು. ತಮಗೆ ಪೂರ್ಣ ಕುರುಡತ್ವ ಬರುವುದರ ಒಳಗೆ ಶಿಕ್ಷಣದ ಜೊತೆಗೆ ಉದರ ನಿರ್ವಹಣೆಗೆ ಪ್ರಾಯೋಗಿಕ ಮೇಣದ ಬತ್ತಿಯ ತಯಾರಿಕೆ, ದೇಹಕ್ಕೆ ಮಸಾಜ್ ಮಾಡುವ ಹಾಗೂ ಇನ್ನಿತರೆ ತರಬೇತಿಯನ್ನು ತೆಗೆದುಕೊಳ್ಳ ಹತ್ತಿದರು. ಪದವಿ ಶಿಕ್ಷಣ ಮುಗಿಯುವ ಹಂತದಲ್ಲಿದ್ದಾಗ ಮತ್ತೊಂದು ದೊಡ್ಡ ಆಘಾತ ಎದುರಿಸಬೇಕಾಯಿತು. Cancer ಆಯಿತು ತಾಯಿಗೆ. ಅದೇ ಸಮಯಕ್ಕೆ ಅವರಿಗೆ ಏನೂ ಕಾಣಿಸದಾಯಿತು. ಆಗ ಅವರ ವಯಸ್ಸು ಕೇವಲ 23. ಒಂದು ಕಡೆ ತಾಯಿಯ ಕಾಯಿಲೆ ಮತ್ತೊಂದೆಡೆ ಪೂರ್ಣ ಅಂಧತ್ವ, ಅದರ ಮೇಲೆ ಹಣಕಾಸಿನ ಅಡಚಣೆ. ಸ್ವಲ್ಪ ಕಾಲ ಹೋಟೇಲ್‌ನಲ್ಲಿ ಕೆಲಸವನ್ನು ಮಾಡಿ ಬಿಡಬೇಕಾಯಿತು (ಅಂಧತ್ವದಿಂದ). ಏನಾದರೂ ದಾರಿ ಹುಡುಕಲೇ ಬೇಕೆಂಬ ಛಲದಿಂದ ಮನೆಯಲ್ಲಿ ಮೇಣದ ಬತ್ತಿಗಳನ್ನು ಮಾಡಿ ಮಾರಲಿಕ್ಕೆ ನೋಡಿದರು. ಒಬ್ಬ ಗೆಳೆಯನ ಸಹಾಯದಿದ ಒಂದು ತಳ್ಳು ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಮಹಾಬಲೇಶ್ವರ ಬೀದಿಯಲ್ಲಿ ಮಾರಾಟ ಮಾಡಲು ಪ್ರಾರಂಭಿಸಿದರು.

ಮಹಾಬಲೇಶ್ವರ ಒಂದು ಸುಂದರ ಪ್ರೇಕ್ಷಣೀಯ ತಂಪು ಹವೆಯ ತಾಣ. ಎಲ್ಲರಿಗೂ ಅದನ್ನು ನೋಡುವ ಆಸೆ ಹಾಗೆಯೇ ಅಲ್ಲಿಯೇ ಕೆಲದಿನ ಇರುವ ಆಸೆ. ಇದರಿಂದ ಮನಸ್ಸಿಗೆ ವಿಶ್ರಾಂತಿ ಹಾಗೆಯೇ ದೇಹಕ್ಕೂ ಸಹ. ದೇಹಕ್ಕೆ ಮಸಾಜ್ ಮಾಡಿದರೆ ಇನ್ನು ಒಳ್ಳೆಯದು ಅಂತ ಬಹು ಜನರ ಭಾವನೆ. ಭಾವೇಶ್ ಅವರ ಉಳಿದ ಸಮಯದಲ್ಲಿ ಇದನ್ನು ಆರಿಸಿಕೊಂಡರು. ಮಸಾಜ್ ಮಾಡುವ ಕಲೆ ಸಣ್ಣದಾಗಿ ಪ್ರಾರಂಭಿಸಿದರೂ ಬೇಗನೇ ಎಲ್ಲರಿಗೂ ಇವರು ಮಾಡುವ ಮಸಾಜ್ ವಿಧಾನ ಇಷ್ಟವಾಗತೊಡಗಿತು. ಇವರ ಕೀರ್ತಿ ಪಂಚತಾರಕ ಹೋಟೇಲವರೆಗೂ ಮುಟ್ಟಿತು. ಒಂದು ಕಡೆ ಮೇಣದ ಬತ್ತಿಯ ಮಾರಾಟ, ಮತ್ತೊಂದೆಡೆ ಮಸಾಜ್ ಕೆಲಸ, ಇದಲ್ಲದೆ ತಾಯಿಯ ಆರೈಕೆ ಬೇರೆ. ಆದರೆ ತಾಯಿ ಬಹುಕಾಲ ಬದುಕಲಿಲ್ಲ. ಬೇಗ ಇಹಲೋಕ ತ್ಯಜಿಸಿದಳು. ಮನಸ್ಸು ದುಃಖದ ಮಡುವಿನಲ್ಲಿ ಮುಳುಗಿತು. ತಾಯಿ ಹೇಳಿದ ಮಾತು ಮನಸ್ಸಿನಲ್ಲಿ ಕೊರೆಯುತ್ತಲೇ ಇತ್ತು. ಒಂದು ದೃಢ ನಿಶ್ಚಯದಿಂದ ತಾವು

ಕೊಡಿಟ್ಟ ಸುಮಾರು ರೂ. 5000 ಯಲ್ಲಿ ಕಚ್ಚಾ ಮೇಣವನ್ನು ಹಾಗೂ ಕೆಲವು ಅಚ್ಚುಗಳನ್ನು ಕೊಂಡು ಮೇಣದ ಬತ್ತಿಗೆ ಬೇರೆ ಬೇರೆ ಬಣ್ಣ ತುಂಬಿದರು. ಅದರ ಸಂಗಡ ಸುಗಂಧ ದ್ರವ್ಯಗಳನ್ನು ಸೇರಿಸಿ ತಳ್ಳುಗಾಡಿಯಲ್ಲಿ ಮಾರಾಟ ಮಾಡತೊಡಗಿದರು. ಇವರು ಕಲಿತಿದ್ದರಿಂದ ಮಾತನಾಡುವ ಕಲೆಯೂ ಕರಗತವಾಗಿತ್ತು. ಮಾತಿನ ಮೋಡಿಯಲ್ಲಿ ಜನರನ್ನು ಆಕರ್ಷಿಸಿ ತಮ್ಮ ವಸ್ತುಗಳನ್ನು ಮಾರಾಟ ಮಾಡತೊಡಗಿದರು. ವ್ಯಾಪಾರವೇನೋ ಚೆನ್ನಾಗಿಯೇ ನಡೆಯಲಾರಂಭಿಸಿತು.

ಒಂದು ದಿನ ಒಂದು ಹರೆಯದ ಹುಡುಗಿ (ಮುಂಬಯಿಯವಳು) ಬಂದು ಕೆಲವೊಂದು ಮೇಣದ ಬತ್ತಿಯ ವಸ್ತುಗಳನ್ನು ಕೊಂಡಳು. ಮರುದಿನ ಆ ಹುಡುಗಿ ತಿರುಗಿ ಬಂದು "ಏನಾದರೂ ಸಹಾಯ ಮಾಡಲಾ" ಅಂತ ಕೇಳಿದಳು. ಅವರು ಹುಂ ಅನ್ನುವುದಕ್ಕೆ ಮೊದಲೇ ಅವರಿಗೆ ಸಹಾಯ ಮಾಡಲು ಪ್ರಾರಂಭಿಸಿದಳು. ಸುಮಾರು ದಿನ ಈ ರೀತಿಯ ಸಹಾಯ ಮಾಡಿದ ಹುಡುಗಿ, ಅವರಿಗೆ ಒಂದು ದಿನ ಕೇಳಿದಳು. 'ನೀನು ನನ್ನನ್ನು ಮದುವೆ ಆಗುತ್ತೀಯಾ' ಅಂತ. ಭಾವೇಶ ಅವರಿಗೆ ಏನು ಹೇಳಬೇಕೆಂಬುದೇ ಗೊತ್ತಾಗಲೇ ಇಲ್ಲ. ತಾನು ಕುರುಡ, ಮೇಲೆ ಮನೆಯ ಪರಿಸ್ಥಿತಿ ಅಷ್ಟಕಷ್ಟೇ, ಅವಳೋ ಆಗರ್ಭ ಶ್ರೀಮಂತ ಮನೆತನದ ಹುಡುಗಿ. ಇದು ಸಿನಿಮಾದ ಕಥೆ ಇರುವ ಹಾಗೆ ಅನಿಸಿದಂತೆ. ಆ ಹುಡುಗಿಯ ದೃಢ ನಿಶ್ಚಯದ ಮುಂದೆ ಇವರು ಹೂ ಅನ್ನಲೇ ಬೇಕಾಯಿತು, ಅವಳ ಮನೆಯ ವಿರೋಧದ ನಡುವೆ ಇವರ ಮದುವೆ ಆಯಿತು. ಕೆಲ ಮೇಣದ ಪಾತ್ರೆಗಳೇ ಇವರ ಅಡುಗೆಯ ಪಾತ್ರೆಗಳು. ಈಗ ವ್ಯಾಪಾರ ಇಬ್ಬರೂ ಕೂಡಿ ಮಾಡತೊಡಗಿದರು. ಈ ನಡುವೆ ಪುಣೆ ಇನ್ಫೋಸಿಸ್ ಕಂಪೆನಿಯ ನವ ದಂಪತಿಗಳು ಮಹಾಬಳೇಶ್ವರಕ್ಕೆ ವಾರಾಂತ್ಯದಲ್ಲಿ ಬಂದಾಗ, ಇವರು ಮಾಡಿದ ಮೂರ್ತಿಗಳನ್ನು ನೋಡಿ ಆಕರ್ಷಿತರಾದರು ಹಾಗೂ ಕೆಲವನ್ನು ಕೊಂಡು ಕೊಂಡರು. ನಂತರ ತಾವೇ ತಮ್ಮ ಪರಿಚಯ ಮಾಡಿಕೊಂಡು ಇವರಿಗೆ ಪುಣೆಗೆ ಬರಲು ಆಹ್ವಾನಿಸಿದರು. ಇವರೇನೂ ಹೂಂ ಅಂದರು. ಆದರೆ ವಿಶ್ವಾಸವಿರಲಿಲ್ಲ. ಎಷ್ಟೋ ಜನ ಈ ರೀತಿ ಹೇಳಿದಾರೆ. ಆದರೆ ಯಾವುದೂ ಅಷ್ಟಾಗಿ ಫಲ ಕೊಟ್ಟಿರಲಿಲ್ಲ. ಈ ಸಲ ಮಾತ್ರ ಅದು ಹುಸಿ ಹೋಗಲಿಲ್ಲ. ಆ ಅಧಿಕಾರಿ ದಂಪತಿಗಳು ಹೋದ ಕೆಲ ದಿನಗಳ ನಂತರ ಅವರಿಂದ ಕರೆ ಬಂತು. "ನೀವು ನಿಮ್ಮ ಎಲ್ಲ ಮೇಣದ ಆಕೃತಿಗಳನ್ನು ತೆಗೆದುಕೊಂಡು ಬನ್ನಿರಿ" ನಾನು ಎಲ್ಲ ಏರ್ಪಾಡು ಮಾಡಿದ್ದೇನೆ" ಅಂತ ವಿಳಾಸದ ಸಂಗಡ ಪತ್ರವು ಬಂತು. ಅದದ್ದಾಗಲಿ ಎಂದು ಆವರಿಬ್ಬರು ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಪುಣೆಗೆ ಹೋಗಿ ಆ ಕಂಪೆನಿಯಲ್ಲಿ ಪ್ರದರ್ಶಿಸಿದರು. ನೋಡ್ತಾ ನೋಡ್ತಾ ಎಲ್ಲರೂ ಬಂದು ತೆಗೆದುಕೊಂಡು ಹೋದರು. ಅಲ್ಲದೆ ಮತ್ತೆ ಬೇಕು ಅಂತ demand ಬಂತು. ಇವರು ತಿರುಗಿ ಊರಿಗೆ ಬಂದರು. ಈಗ ಹೊಸ ಸಮಸ್ಯೆ ಎದುರಾಯಿತು. ಅದು ಕಚ್ಚಾ ವಸ್ತುವಿನದಲ್ಲ. ಅದು ಮನುಷ್ಯ ಬಲದ್ದು ಹಾಗು ಹಣಕಾಸಿನದ್ದು. ಹುಡುಕಿದರೆ ಜನರೇನೋ ಸಿಗುತ್ತಿದ್ದರು. ಆದರೆ ಇವರು ಕಡು ಬಡವರು, ಅಂಧರು ಮತ್ತು ಮಹಾಬಳೇಶ್ವರದ ಬೀದಿಯಲ್ಲಿ ಭಿಕ್ಷೆ ಬೇಡುವವರು. ಅವರಲ್ಲಿ ಕೆಲವರನ್ನು ಆಯ್ದು ಇವರು ತರಬೇತಿ ಕೊಟ್ಟು ಕೆಲಸಕ್ಕೆ ಇಟ್ಟುಕೊಂಡರು. ವ್ಯಾಪಾರ ಭರದಿಂದ ಸಾಗಿತು. ಎಲ್ಲರೂ ಇವರು ಮಾಡಿದ ಮೂರ್ತಿಗಳಿಗೆ ಮಾರುಹೋದರು. ಪ್ರಸಿದ್ಧಿಯೂ ಬಂತು ಅದರ ಜೊತೆಗೆ ಹಣವೂ ಬಂತು. ನಂತರ ಪುಣೆಗೆ ಹೋಗಿ ಎಲ್ಲ ಹೆಸರಾಂತ ಕಂಪನಿಗಳಿಗೆ, ಮಾಲ್ ಗಳಿಗೆ ಹೋಗಿ ಮಾರಾಟ ಮಾಡತೊಡಗಿದರು. ಯಾವ ಬ್ಯಾಂಕ್ ಆಗಲಿ ಅಥವಾ ಸಂಸ್ಥೆಯಾಗಲಿ ಇವರಿಗೆ ಧನ ಸಹಾಯ ಮಾಡಲಿಲ್ಲ. ತಮ್ಮದೇ ಆದ ಮೂಲಗಳಿಂದ ಹಣ ಕೂಡಿಸಿದರು. ಇವರ ಕೀರ್ತಿ ರಿಲಾಯನ್ಸ್ ಕಂಪನಿಯ ಮಾಲೀಕರಾದ ಶ್ರೀ ಮುಖೇಶ್ ಅಂಬಾನಿಯವರಿಗೆ ತಲುಪಿತು. ಇವರನ್ನು ಕಂಪೆನಿಗೆ ಕರೆಸಿ ಇವರು ಮಾಡಿದ ಮೇಣದ ಮೂರ್ತಿಗಳಿಗೆ ಮಾರು ಹೋಗಿ ಕೊಂಡುಕೊಂಡರು. ಅದಲ್ಲದೆ ಅವರಿಗೆ ಸತ್ಕಾರ ಮಾಡಿ ಸಹಾಯಧನ ಅಂತ 51 ಲಕ್ಷ ರೂಪಾಯಿಗಳನ್ನು ಕೊಟ್ಟರು. ಅವರು ಅದನ್ನು ಅತಿ ವಿನಯದಿಂದ ತಿರಸ್ಕರಿಸಿ, ನಮಗೆ ಹೆಚ್ಚಿನ ಹಣ ಬೇಡ, ನಮ್ಮ ಮೇಣದ ಬತ್ತಿಯ ಮೂರ್ತಿಗಳನ್ನು ಕೊಂಡು ಉತ್ತೇಜಿಸಿ ಎಂದು ವಿನಂತಿಸಿದರು. ಅದು ಫಲಕಾರಿ ಆಯಿತು. ಈಗ ಅವರು ಒಂದು ಹಳ್ಳಿಯ ಹತ್ತಿರ ಸ್ಥಳವನ್ನು ಖರೀದಿಸಿ ಬರೆ ಅಂಧರನ್ನು ಕೆಲಸಕ್ಕೆ ಇಟ್ಟುಕೊಂಡರು. ಅದರ ಸಂಗಡ wax museum ಕಟ್ಟಿದರು. ಈಗ ಇವರ ವ್ಯಾಪಾರ ದೇಶದಲ್ಲೆಲ್ಲ ಹರಡಿದುದು ಅಲ್ಲದೆ ಸುಮಾರು 60ಕ್ಕೂ ಹೆಚ್ಚು ವಿದೇಶಗಳಲ್ಲಿ ಇವರ ಮೂರ್ತಿಗಳು ಮಾರಾಟವಾಗುತ್ತಿವೆ. ಕಂಪೆನಿಗೆ ಹೆಸರು ಇಡಲಾಯಿತು. "SUN RISE CANDLES" ಅಂತ. ಇವರ ಹತ್ತಿರ 9700 ಮಿಕ್ಕಿದ ಮೇಣದ ಮೂರ್ತಿಗಳ ಅಚ್ಚುಗಳಿವೆ. ಸುಮಾರು 10,000 ಕ್ಕಿಂತಲೂ ಹೆಚ್ಚಿನ ಅಂಧ ಜನರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ತಮ್ಮ ಕುಟುಂಬವನ್ನು ನಡೆಸುತ್ತಿದ್ದು, ಇವರಿಗೆ ಋಣಿಯಾಗಿದ್ದಾರೆ. ಇವರ ವಾರ್ಷಿಕ ಆದಾಯ ಸುಮಾರು ರೂ. 350 ಕೋಟಿಗೂ ಅಧಿಕ. ಶ್ರೀ ಭಾಟಿಯಾ ಅವರ ಈ ಸಾಹಸಗಾಥೆಗೆ ಪ್ರಶಸ್ತಿಗಳ ಮಹಾಪೂರವೇ ಹರಿದು ಬಂತು. ಇಸವಿ 2014, 2016, 2019 ರಲ್ಲಿ ಅಂಧರಿಗಾಗಿ ಸ್ವಯಂ ಉದ್ಯೋಗದಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ರಾಷ್ಟ್ರಪತಿಗಳಿಂದ ಪುರಸ್ಕಾರ. ಮಹಾರಾಷ್ಟ್ರ ಸರಕಾರದಿಂದ 'ಉದ್ಯೋಗ ಭೂಷಣ' ಪುರಸ್ಕಾರ. ಬೆಳಗಾವಿಯ ರಾಣಿ ಚೆನ್ನಮ್ಮದೇವಿ ವಿಶ್ವವಿದ್ಯಾನಿಲಯದಿಂದ (University) ಗೌರವ ಡಾಕ್ಟರೇಟ್. ಈಗ ಇವರು ಡಾ॥ ಭಾವೇಶ್ ಭಾಟಿಯಾ. ಇದಲ್ಲದೆ ದೇಶದ ಅನೇಕ ಸಂಘ ಸಂಸ್ಥೆಗಳು ಇವರನ್ನು ಕರೆಯಿಸಿ ಗೌರವಿಸಿದೆ.

ಇವರ ಸಾಹಸ ಗಾಥೆ ಇಲ್ಲಿಗೆ ನಿಲ್ಲಲಿಲ್ಲ. ಕೆಲಸದ ಜೊತೆಗೆ ಆಟದಲ್ಲಿಯೂ ಇವರು ಸೈ ಅನಿಸಿಕೊಂಡರು. National Para Olympicನಲ್ಲಿ ಇವರು Discuss, Shotput, ಹಾಗೂ Javelian ನಲ್ಲಿ ಚಿನ್ನದ ಪದಕಗಳನ್ನು ಪಡೆದಿದ್ದಾರೆ (2014, 2016ರಲ್ಲಿ) ಇಲ್ಲಿಯವರೆಗೆ ಒಟ್ಟು 117ಕ್ಕೂ ಹೆಚ್ಚು ಪದಕಗಳನ್ನು National ಮತ್ತು International Para Olympic Gamesನಲ್ಲಿ ಗಳಿಸಿ ದೇಶಕ್ಕೆ ಕೀರ್ತಿ ತಂದು ಅಂಧರ ಆಟಗಾರರಿಗೆ ಪ್ರೇರಣೆ ನೀಡಿದ್ದಾರೆ. ಇವರು ಒಳ್ಳೆಯ ಮಾತುಗಾರರು ಕೂಡ. ಬಹಳಷ್ಟು Multinational Companyಗಳಲ್ಲಿ ಇವರು ಭಾಷಣ ಮಾಡಿ ಅಲ್ಲಿಯ ಜನರಿಗೆ ಸ್ಫೂರ್ತಿ ನೀಡಿದ್ದಾರೆ. ಅವರ ಸಾಹಸಗಾಥೆಯ ಬಗ್ಗೆ ಪುಸ್ತಕಗಳು ಸಹ ಬಂದಿವೆ.

ಇವರದು ಸುಖ ಸಂಸಾರ. ಪತ್ನಿಯ ಸಂಗಡ ಮಗ ಕುಣಾಲ ಸಹ ಇವರಿಗೆ ಕೈ ಜೋಡಿಸಿದ್ದಾರೆ. ಇವರ ಕಂಪೆನಿಯ ಸಂಕೇತದ ಸ್ಥಳ www.sunrisecandles.com ಡಾ॥ ಭಾವೇಶ್ ಭಾಟಿಯಾ ಅವರ ಒಂದು ಮುತ್ತಿನಂತಹ ಮಾತು ಹಿಂದಿಯಲ್ಲಿ ಈ ರೀತಿ ಹೇಳಿದ್ದಾರೆ.

ಹಮ್ ಬೇಚಾರೆ ನಹಿ ಹೈ ಔರ್ ನಹಿ ರಹೇಂಗೇ. ಬೇಚಾರೆ ತೋ ವೋ ಹೈ ಜೋ ಕುಛ್ ಭೀ ನಹಿ ಕರ್ ಸಕ್ತಾ. ಒಂದು ಹಿಂದಿ ಸಿನಮಾದ ಹಾಡು ಇವರಿಗೆ ಅತಿ ಪ್ರಿಯ .. ರೂಕ್ ಜಾನಾ ನಹಿ ತು ಕಹೀ ಹಾರಕೇ.......

ಇವರು ತಯಾರು ಮಾಡಿದ ಮೇಣದ ವಸ್ತುಗಳೆಲ್ಲ ಈಗ ಅಮೇಜಾನ್‌ನಲ್ಲೂ ಉಪಲಬ್ಧವಿದೆ.

ಮನೆಗೆಲಸ

(ಉಮಾ ರಾವ್ ಕಥೆಗಳು)

✍ ಉಮಾ ರಾವ್

ಅಂದಿಗೆ ಅವನಿಗೆ ಕೆಲಸ ಹೋಗಿ ಒಂದು ವಾರ. ಸಿರಿಯನ್ನು ಸ್ಕೂಲ್ ಬಸ್ ಹತ್ತಿಸುತ್ತಿರುವುದು ಮೊದಲನೇ ದಿನ. ಮೊದಲೆಲ್ಲಾ ಇವನು ಏಳೂವರೆಗೆ ಆಫೀಸಿಗೆ ಹೊರಟರೆ, ಮಮತಾ ಎಂಟು ಗಂಟೆಗೆ ಸರಿಯಾಗಿ ಅಪಾರ್ಟ್‌ಮೆಂಟಿನ ಗೇಟಿನ ಹತ್ತಿರ ಹಾಜರಾಗಿ, ಸಿರೀನ ಸ್ಕೂಲ್ ಬಸ್ ಹತ್ತಿಸಿ ತಾನೇ ಡ್ರೈವ್ ಮಾಡಿಕೊಂಡು ಕಾರಿನಲ್ಲಿ ಕೆಲಸಕ್ಕೆ ಹೊರಡುತ್ತಿದ್ದಳು. ಆ ಸ್ಕೂಲು ಬಸ್ಸು ಹತ್ತುತ್ತಿದ್ದವರಲ್ಲಿ ಇನ್ನೂ ಆರು ಮಕ್ಕಳು ಇದ್ದರು. ಅವರಲ್ಲಿ ನಾಲ್ಕು ಮಕ್ಕಳ ತಾಯಿಯರಾದ ಖುಷಿ, ನೈನಾ, ಸರಸಾ, ರಕ್ಷಿತಾ ಬಿಟ್ಟರೆ ಒಂದು ಮಗುವಿನ ತಾತ, ಒಂದು ಮಗುವಿನ ಅಜ್ಜಿ ಮಕ್ಕಳ ಜೊತೆಗೆ ಬರುತ್ತಿದ್ದರು. ಮಕ್ಕಳೂ, ತಾಯಿಯರೂ ಅವರಿಬ್ಬರನ್ನೂ ತಾತ, ಅಜ್ಜಿ ಎಂದೇ ಕರೆಯುತ್ತಿದ್ದುದರಿಂದ ಅವರು ಯಾರಿಗೂ ಆ ಇಬ್ಬರು ವೃದ್ಧರ ಹೆಸರು ಗೊತ್ತಿರಲಿಲ್ಲ.

ಸಿವಿಲ್ ಎಂಜಿನಿಯರ್ ಆಗಿದ್ದ ರಮೇಶ ಒಂದು ಪ್ರೈವೇಟ್ ಕನ್ಸಲಿಂಗ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ. ಸುಮಾರು ಸಂಬಳ. ಮಮತಾ ಸಾಫ್ಟ್‌ವೇರ್ ಎಂಜಿನಿಯರ್. ಜೊತೆಗೆ ಎಂಬಿಎ. ಒಳ್ಳೆ ಹುದ್ದೆ. ರಮೇಶನಿಗಿಂತಾ ಮೂರು ಪಟ್ಟು ಸಂಬಳ. ತನ್ನ ಕಂಪೆನಿ ಮುಚ್ಚುವುದೆಂದು ಗುಮಾನಿ ಬಂದ ದಿನದಿಂದಲೇ ರಮೇಶ ಹಲವಾರು ಕಡೆ ಅರ್ಜಿ ಹಾಕಲು ಶುರು ಮಾಡಿದ. ಆದರೆ ಇದುವರೆಗೂ ಪ್ರಯೋಜನವಾಗಿರಲಿಲ್ಲ. ಈಗಿನ ಮಾರುಕಟ್ಟೆಯಲ್ಲಿ ತನ್ನಂಥವರಿಗೆ ಡಿಮ್ಯಾಂಡ್ ಕಡಿಮೆ ಎನ್ನುವುದೂ ಅವನಿಗೆ ತಿಳಿದಿತ್ತು. ಇದರಿಂದ ಮನಸ್ಸಿನಲ್ಲಿ ಒತ್ತಡ ಏರುತ್ತಲೇ ಇತ್ತು.

ಮೊದಮೊದಲು ಬೇಜಾರು ಮಾಡಿಕೊಂಡು ಮಾತಿಲ್ಲದೇ ಕೂತಿರುತ್ತಿದ್ದ ರಮೇಶ ವಾರದ ನಂತರ ಮೈ ಕೊಡವಿಕೊಂಡು ಎದ್ದ. ಮೊದಲ ಮಾತು ಅವನು ಮಮತಾಗೆ ಹೇಳಿದ್ದು ಸೋಮವಾರದಿಂದ ತಾನೇ ಸಿರಿಯನ್ನು ಸ್ಕೂಲ್ ಬಸ್ ಹತ್ತಿಸುವುದಾಗಿ, ಹಗುರ ಎನಿಸಿದರೂ ಅವನ್ನು ತೋರಿಸಿಕೊಳ್ಳಬಾರದೆಂದು "ಅದಕ್ಕೇನು, ನನಗೆ ಅಭ್ಯಾಸ ಅವನ ಮಾತು ಕೇಳಿದಾಗ ಬೆಳಗಿನ ಅಡಾವುಡಿ ಸ್ವಲ್ಪ ಕಡಿಮೆಯಾಯಿತೆಂದು ಮಮತಾಗೆ ವಾಗಿದೆಯಲ್ಲ, ನಾನೇ ಹತ್ತಿಸ್ತೀನಿ. ನಿಮಗೂ ಚಾನ್ಸ್ ಸಿಕ್ಕಾಗ ಸ್ವಲ್ಪ ಆರಾಮಾಗಿರಿ. ಮತ್ತೆ ಕೆಲಸ ಶುರುವಾದರೆ ಓಡೋದು ಇದ್ದದ್ದೇ" ಎಂದಳು. "ಆರಾಮಾಗಿ ನೀನಿರು. ನಿಧಾನವಾಗಿ ರೆಡಿಯಾಗು. ದಿನವೆಲ್ಲಾ ಮನೇಲೆ ಕೂತು ಬೋರ್ ಆಗಿದೆ. ಮಗೂನ ಬಸ್ಸಿಗೆ ಬಿಡೋದೂ ಒಂದು ಖುಷಿ ತಾನೇ" ಎಂದ. ಮಮತಾ ಸುಮ್ಮನಾದಳು.

ಸೋಮವಾರ ಬೆಳಗ್ಗೆ ಮಮತಾ ಎಂದಿನಂತೆಯೇ ಎದ್ದಿದ್ದಳು. "ಇನ್ನಷ್ಟು ಹೊತ್ತು ಮಲಗಬಹುದಿತ್ತಲ್ಲಾ" ಎಂದು ಇವನಂದಿದ್ದಕ್ಕೆ, ಇವನ ಕಡೆ ತಿರುಗದೆ, "ಅಭ್ಯಾಸಬಲ" ಎಂದು ಬಲವಂತದ ನಗೆ ತೋರಿದಳು. ಮನೆ ಸುತ್ತಾ ಅದು ಇದು ಹುಡುಕುವವಳಂತೆ ಓಡಾಡಿದಳು. ಸಿರಿಯ ಯೂನಿಫಾರ್ಮ್ನಲ್ಲಿ ಇಲ್ಲದ ಸುಕ್ಕು ಕಂಡು ಹಿಡಿದು ಮತ್ತೊಮ್ಮೆ ಇಸ್ತ್ರಿ ಮಾಡಿದಳು.

ರಮೇಶನಿಗೆ ಯಾಕೋ ಇವಳ ಚಡಪಡಿಕೆ ವಿಚಿತ್ರವೆನ್ನಿಸಿದರೂ ಅವನು ಮಾತಾಡಲಿಲ್ಲ. ಅವನು ಇನ್ನೇನು ಸಿರಿಗೆ ಶೂ ಲೇಸ್ ಕಟ್ಟಿ ಹೊರಡಲು ಬೀದಿ ಬಾಗಿಲ ಹತ್ತಿರ ಹೋದಾಗ "ಒಂದು ನಿಮಿಷ" ಎಂದಳು.

"ನೋಡಿ ಯಾರಾದರೂ ಇದೇನು ನೀವು ಬಸ್ಸು ಹತ್ತಿಸ್ತೀರಾಂತ ಕೇಳಿದ್ರೆ... ನಾನು. ಮನೆಯಿಂದಲೇ ಕೆಲಸ ಮಾಡ್ತಿದೀನಿ ಅಂತ ಹೇಳಿ. ಕೆಲಸ ಹೋಗಿದೆ ಅಂತ ಹೇಳ್ಬೇಡಿ' ಅಂದವಳೇ ಅಡಿಗೆ ಮನೆಯತ್ತ ಧಾವಿಸಿದಳು.

ರಮೇಶನ ಮುಖ ಕೆಂಪಾಯಿತು. ಸಿರಿಯ ಕೈಬಿಟ್ಟು ಅವಳ ಹಿಂದೆ ಹೋದವನೇ "ಯಾಕೆ" ಎಂದ. ಅವನ ಧ್ವನಿ ಅವನು ಎಣಿಸಿದ್ದಕ್ಕಿಂತ ಜೋರಾಗಿಯೇ ಇತ್ತು.

"ಏನಿಲ್ಲ, ಅಪಾರ್ಟ್‌ಮೆಂಟ್ ಜನ ಅದನ್ನೇ ದೊಡ್ಡ ಗಾಸಿಪ್ ಮಾಡ್ತಾರೆ..." ಎನ್ನುತ್ತಿರುವಾಗಲೇ ಸಿರಿ "ಅಪ್ಪ ಬಸ್ ಹಾರ್ನ್" ಎಂದಳು. ರಮೇಶ ಸಿರಿ ಕೈ ಹಿಡಿದು, ಬ್ಯಾಗೆತ್ತಿಕೊಂಡು ಧಡಧಡನೆ ಮೆಟ್ಟಿಲಿಳಿದು ಹೋದ.

****

ಸಂಜೆ ಮಮತಾ ಮನೆಗೆ ಬಂದು ಮುಖ ತೊಳೆದು ಕಾಫಿ ಕಪ್ ಹಿಡಿದು ಬಂದಾಗ ವಾತಾವರಣ ಗರಂ ಆಗಿಯೇ ಇರುವುದು ಅರಿವಾಗುತ್ತಿತ್ತು. ಸಿರಿ ಹೋಂ ವರ್ಕ್ ಮಾಡುತ್ತಿದ್ದಳು. ರಮೇಶ ಯಾವುದೋ ಪುಸ್ತಕ ಓದುತ್ತಿದ್ದವನು ತಲೆ ಎತ್ತಲಿಲ್ಲ.

ವಾತಾವರಣ ತಿಳಿಯಾಗಿಸಲು ಮಮತಾ ಸಿರಿಯ ಸ್ಕೂಲಿನ ಬಗ್ಗೆ ವಿಚಾರಿಸಿದಳು. ಅಂದಿನ ಮೇಲ್ ನೋಡಿದಳು. ಬಂದಿದ್ದ ಲಗ್ನ ಪತ್ರಿಕೆ ನೋಡಿ "ಓ. ನೋಡಿ ನಮ್ಮ ರಚಿತಾ ಮದುವೆ!" ಎಂದಳು. ಟಿವಿ ಹಾಕಿ ಕ್ರಿಕೆಟ್ ಚ್ಯಾನೆಲ್ ಗೆ ತಿರುಗಿಸಿ ಇವತ್ತು ಮ್ಯಾಚಿಲ್ವಾ ಅಂತ ಉದ್ಗರಿಸಿದಳು. ರಮೇಶ ತಲೆ ಎತ್ತಲಿಲ್ಲ. ಮೌನ ಅಸಹನೀಯವಾದಾಗ ಅವನ ಹತ್ತಿರ ಹೋಗಿ ನಿಂತು. "ಏನಾಯು ಈಗ ಮುಖ ದಪ್ಪ ಮಾಡಿಕೊಳ್ಳೋಕೆ" ಎಂದು ಸ್ವಲ್ಪ ಜೋರಾಗಿಯೇ ಅಂದಳು. ರಮೇಶ ನಿಧಾನವಾಗಿ ತಲೆ ಎತ್ತಿದ. ತಣ್ಣಗೆ ನಾನೇಕೆ ಸುಳ್ಳು ಹೇಳಬೇಕು ಕೆಲಸದ ಬಗ್ಗೆ?" ಎಂದ. ಅವಳು ತಿಳಿದಿದ್ದರೂ ಈಗ ತಿಳಿದವಳಂತೆ ಅವನ ಹತ್ತಿರ ಬಂದು ಹಿಂದಿನಿಂದ ಕೊರಳು ಕಟ್ಟಿಕೊಂಡು "ಏನು ಸುಳ್ಳು" ಎಂದಳು.

"ಸ್ಟಾಪ್ ಪ್ರಿಟೆಂಡಿಂಗ್, ನಾನ್ಯಾಕೆ ಎಲ್ಲರಿಗೂ ಮನೆಯಿಂದಲೇ ಕೆಲಸ ಮಾಡ್ತಿದೀನಿ ಅಂತ ಹೇಳ್ಬೇಕು?'

ಮೆಲುವಾಗಿ "ಇಷ್ಟೊಂದು ಚಿಕ್ಕ ವಿಷಯಕ್ಕೆ ಇಷ್ಟು ಬೇಜಾರು ಮಾಡಿಕೊಂಡರೆ ಹೇಗೆ?" ಎಂದಳು.

ಅವನು ಮೆಲ್ಲಗೆ ಅವಳ ತೋಳುಗಳನ್ನು ಬಿಡಿಸಿಕೊಂಡ. "ಅದು ಅಷ್ಟು ಚಿಕ್ಕ ವಿಷಯವಾಗಿದ್ದರೆ ಸುಳ್ಳೇಕೆ ಹೇಳಬೇಕು?" ಎಂದ.

"ಹಾಗಲ್ಲ... ಈ ಬಿಲ್ಡಿಂಗಿನ ಜನ ಗೊತ್ತಲ್ಲಾ, ಆಡಿಕೋತಾರೆ. ಅವರ ಬಾಯಿಗೇಕೆ ಬೀಳಬೇಕು? ಇನ್ನು ಹಾಗೇ ಈ ವಿಷಯ ನೆಂಟರು, ಸ್ನೇಹಿತರಿಗೂ ಹೋದರೆ ಆಗೇ ಹೋಯಿತು. ನನ್ನ ಅಪ್ಪ, ಅಮ್ಮ ಅಂತೂ ಎದೆ ಒಡೆದು ಕೂಡ್ತಾರೆ. ಇದೆಲ್ಲಾ ರಂಪ ಯಾಕೆ?"

"ಏನು ನಿನ್ನ ಅಪ್ಪ ಅಮ್ಮನಿಗೂ ಹೇಳಿಲ್ಲವೇ" ಎಂದಾಗ ಮಮತಾ ತಲೆ ಅಲ್ಲಾಡಿಸಿದಳು.

ಅಪ್ಪನಿಗೆ ಹಾರ್ಟ್ ಸ್ವಲ್ಪ ವೀಕಲ್ಲಾ..." ಎಂದು ಸಣ್ಣಗೆ ರಾಗ ಎಳೆದಳು.

"ಈಗ ಕೆಲಸ ಹೋಗೋದು ತುಂಬಾ ಕಾಮನ್, ಐಟಿಬೀಟಿಲಂತೂ ವರ್ಷಕ್ಕೆ ಎರಡು ಕೆಲಸ ಬದಲಾಯಿಸ್ತಾರೆ ಜನ..." ಎಂದ ರಮೇಶ.

"ಐಟಿಬಿಟಿ ವಿಷಯ ಬೇರೆ..." ಎಂದವಳೇ ಮಮತಾ ಹಲ್ಲು ಕಚ್ಚಿದಳು. ತನ್ನ ತಪ್ಪು ತಿಳಿದಿತ್ತು.

"ನೀನು ಹೇಳೋದು ಸರಿ. ಇಟ್ಸ್ ಡಿಫೆರೆಂಟ್ ವಿಥ್ ಯುವರ್ ಫೀಲ್ಡ್..." ಎಂದವನೇ ರಮೇಶ ಅಲ್ಲಿಂದ ಎದ್ದು ಹೋದ.

ನಿಧಾನವಾಗಿ ದಿನ ಕಳೆಯತೊಡಗಿತು. ರಮೇಶನಿಗೆ ಹೆಚ್ಚು ಇಂಟರ್ವ್ಯೂ ಕರೆಗಳೂ ಬರಲಿಲ್ಲ. ಬಂದದ್ದೂ ಪ್ರಯೋಜನವಾಗಲಿಲ್ಲ. ಮೊದಲಿದ್ದ ವಿಶ್ವಾಸ ಕುಂದತೊಡಗಿತು.

"ಈಗೀಗ ನೀವೇ ದಿನಾ ಸಿರೀನ ಸ್ಕೂಲ್ ಬಸ್ ಹತ್ತಿಸೋಕೆ ಬರ್ತಿರಲ್ಲ?"

"ಹುಂ"

"ರಜಾ ತಗೊಂಡಿದೀರಾ ?"

"ಇಲ್ಲ"

"ನನ್ನ ಮಗಳಿಗಂತೂ ನಾನೆ ಬಸ್ ಹತ್ತಿಸಬೇಕು. ಸಿರಿ ಅಮ್ಮನ್ನ ಮಿಸ್ ಮಾಡೋಲ್ವಾ "

"ಇಲ್ಲ"

"ಎಷ್ಟು ಗಂಟೆಗೆ ಆಫೀಸಿಗೆ ಹೋಗ್ತಿರಾ?"

"ನಾನು ಮನೆಯಿಂದಲೇ ಕೆಲಸ ಮಾಡ್ತೀನಿ."

ದಿನಾ ಬೆಳಗ್ಗೆ ಮಕ್ಕಳ ಅಪ್ಪ, ಅಮ್ಮಂದಿರಿಂದ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಕೊಟ್ಟು ರಮೇಶನಿಗೆ ಕಿರಿಕಿರಿ ಹೆಚ್ಚಾಯಿತು.

ಮಾರನೆಯ ದಿನದಿಂದ ರಮೇಶ ನ್ಯೂಸ್ ಪೇಪರ್ ಕೈಯಲ್ಲಿ ಹಿಡಿದು ಕೆಳಗೆ ಬರ ತೊಡಗಿದ.

ಬಸ್ ಬರುವವರೆಗೂ ಅದನ್ನು ಮಡಚಿ ಓದುತ್ತಾ, ಒಂದು ಕೈಯಲ್ಲಿ ಸಿರಿ ಕೈ ಹಿಡಿದು ನಿಲ್ಲುತ್ತಿದ್ದ. ಯಾರಿಗೂ ಮಾತಾಡಿಸಲು ಧೈರ್ಯವಾಗುತ್ತಿರಲಿಲ್ಲ.

*****

ಹಾಗೇ ದಿನ ಕಳೆದಂತೆ ರಮೇಶ ಕೆಲಸ ಹುಡುಕುವುದರಲ್ಲೇ ತಲ್ಲೀನನಾಗತೊಡಗಿದ. ಹೆಂಡತಿ, ಮಗು ಮನೆ ಬಿಟ್ಟು ಹೊರಟರೆಂದರೆ ಇಂಟರ್‌ನೆಟ್, ಪೇಪರುಗಳಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಹುಡುಕುತ್ತಿದ್ದ. ಫೋನ್ ಕಾಲುಗಳನ್ನು ಮಾಡಿ ರೆಸ್‌ಪಾನ್ಸ್ ಗುರುತು ಹಾಕಿಕೊಳ್ಳುತ್ತಿದ್ದ.

ಸಂಜೆ ತಿರುಗಾಡಲು ಹೊರಗೆ ಹೋದರೂ ಲ್ಯಾಂಡ್ಲೈನ್ ಮೇಲೆ ಯಾವುದಾದರೂ ಫೋನ್ ಬಂದರೆ ತಪ್ಪದೆ ತನಗೆ ಹೇಳಬೇಕೆಂದು ಮಮತಾಗೆ ನೆನಪು ಮಾಡುತ್ತಿದ್ದ. ಜೊತೆಗೆ ಮನೆಗೆಲಸ, ಸಿರಿ ಕೆಲಸದಲ್ಲಿ ಹೆಚ್ಚು ಹೆಚ್ಚು ಮುಳುಗತೊಡಗಿದ.

ಹಾಗಾಗಿ ಸಿರಿಯ ಹೋಂ ವರ್ಕ್ ಹೊರೆ ಪೂರ್ತಿ ಇವನ ಪಾಲಾದ್ದರಿಂದ ಮಮತಾಗೆ ಎಷ್ಟೋ ಹಾಯೆನಿಸಿತು. ಅವಳು ಮನೆಗೆ ಬರುವ ಹೊತ್ತಿಗೆ ಬಿಸಿಬಿಸಿ ಕಾಫಿ ತಯಾರಾಗಿರುತ್ತಿತ್ತು.

ಬೆಳಗ್ಗೆ ಸಾಕಷ್ಟು ಸಮಯವಿರುತ್ತಿದ್ದುದರಿಂದ ರಾತ್ರಿ ಅಡಿಗೆಯನ್ನು ರಮೇಶನೇ ಮುಗಿಸಿ ಫ್ರಿಜ್‌ನಲ್ಲಿಡುತ್ತಿದ್ದ.

ಚಪಾತಿ ಮಾತ್ರ ಮಮತಾ ಆಫೀಸಿನಿಂದ ಬರುತ್ತಾ ದಾರಿಯಲ್ಲಿ ಪಿಕಪ್ ಮಾಡುತ್ತಿದ್ದಳು.

ಬೆಳಗ್ಗೆ ಇಬ್ಬರ ಡಬ್ಬಗಳೂ ಪ್ಯಾಕಾಗಿ ನೀಟಾಗಿ ಟೇಬಲ್ ಮೇಲೆ ಕೂತಿರುತ್ತಿದ್ದುವು. ಸಂಜೆ ಅವನು ತಿರುಗಾಡಲು ಹೋದಾಗ ತರಕಾರಿ ಹಣ್ಣು ದಿನಸಿ ಶಾಪಿಂಗ್ ಸಹ ಮುಗಿದುಹೋಗುತ್ತಿತ್ತು.

ಅವನಿಗೆ ದಿನ ಕಳೆದಂತೆ ತನಗೆ ಕೆಲಸ ಸಿಗುವ ಬಗ್ಗೆ ಅನುಮಾನ ಹೆಚ್ಚಾಗತೊಡಗಿತು.

ಅಂದು ಸಿರಿಯನ್ನು ಬಸ್ ಹತ್ತಿಸಲು ಹೋದಾಗ ಎಂದಿನಂತೆಯೇ ಪೇಪರಿನಲ್ಲಿ ಮುಖ ಮುಚ್ಚಿಕೊಂಡಿದ್ದರೂ, ಮೌನ ಮುರಿದು ಖುಷಿ "ನಿಮ್ಮ ಮಮತಾ ತುಂಬಾ ಲಕೀಪ್ಪ" ಎಂದಳು.

"ಏಕೆ?" ಎಂದ ರಮೇಶ.

"ನೋಡಿ ನೀವು ಮನೆಯಿಂದಲೇ ಕೆಲಸ ಮಾಡುತ್ತೀರಿ. ಅವರಿಗೆ ಯಾವ ಟೆನ್ಶನ್ನೂ ಇಲ್ಲ! ಮೊನ್ನೆ ಸಿರೀಗೆ ಜ್ವರ ಬಂದಿತ್ತಲ್ಲಾ, ನೀವೇ ನೋಡಿಕೊಂಡ್ರಿ, ಡಾಕ್ಟರ್ ಹತ್ತಿರ ಹೋದ್ರಿ, ಬ್ಲಡ್ ಟೆಸ್ಟ್ ಮಾಡಿಸಿದಿರಿ. ಒಂದು ದಿನ ರಜಾ ಹಾಕಬೇಕಾಗಲಿಲ್ಲ ಮಮತಾಗೆ.

ನಾನು ಗಮನಿಸ್ತಾ ಇರ್ತಿನಿ... ನೀವೇ ಮನೆ ಎಲ್ಲಾ ಮ್ಯಾನೇಜ್ ಮಾಡಿಬಿಡುತ್ತೀರಲ್ಲಾ. ರಿಯಲೀ, ಯೂ ಆರ್ ಅ ಗುಡ್ ಹೋಮ್ ಮೇಕರ್!" ಎಂದಳು. ರಮೇಶ ಪ್ರತಿಕ್ರಿಯಿಸಲಿಲ್ಲ.

ಗುಡ್ ಹೋಮ್ ಮೇಕರ್. ಬಸ್ಸು ಬಂತು.

*****

ರಮೇಶನಿಗೆ ಕೆಲಸ ಹೋಗಿ ಆರು ತಿಂಗಳಾಗಿತ್ತು. ಮನೆಯಲ್ಲಿ ಬದಲಾದ ಒಬ್ಬೊಬ್ಬರ ಪಾತ್ರವೂ ರುಟೀನ್‌ಗೆ ಬಿದ್ದಿತ್ತು. ಹೆಚ್ಚು ಮಾತುಕತೆಯಿಲ್ಲದೆ ಸಂಸಾರ ನಡೆದು ಹೋಗುತ್ತಿತ್ತು. ಈಗೀಗ ಶನಿವಾರ, ಭಾನುವಾರ ಕೂಡಾ ಮಮತಾಗೆ ಪೂರ್ತಿ ನಿದ್ದೆ ಹತ್ತುವವರೆಗೂ ರಮೇಶ ಬೆಡ್ ರೂಮಿಗೆ ಕಾಲಿಡುತ್ತಿರಲಿಲ್ಲ. ಕಂಪ್ಯೂಟರ್ ಮುಂದೆ ಕುಳಿತಿರುತ್ತಿದ್ದ. ಮಮತಾ ಅವನಿಗೆ ದಿನಾ ಬಂದ ಕರೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸಿದ್ದಳು. ಅವರಿಬ್ಬರ ನಡುವೆ ಮಾತಿಗೆ ಕಾರಣವಾಗುವುದು ಸಿರಿ ಮಾತ್ರ. ಅವಳೂ ಮೊದಲಿನಷ್ಟು ಲವಲವಿಕೆಯಿಂದ ಹರಟುತ್ತಿರಲಿಲ್ಲ. ಮದುವೆ ಮುಂಜಿ ಮುಂತಾದ ಸಮಾರಂಭಗಳಿಗೆ ಹೋಗುವುದೂ ಬಂದ್ ಆಯಿತು. ಈ ಬಗ್ಗೆ ಅವರಲ್ಲಿ ಮೌನ ಒಪ್ಪಂದ ಆಗಿತ್ತು. ಅಲ್ಲಿ ಯಾರಾದರೂ ರಮೇಶನ ಕೆಲಸದ ಬಗ್ಗೆ ಕೇಳಿದರೆ ಎಂದು ಮಮತಾಗೆ ಹೆದರಿಕೆ. ಅವಳಿಗೆ ಮುಜುಗರವೇಕೆ ಎಂದು ಅವನೂ ಸುಮ್ಮನಿದ್ದು ಬಿಡುತ್ತಿದ್ದ. ಆದರೆ ಇದೆಲ್ಲಾ ಸೇರಿ ರಮೇಶ ಒಳಗೊಳಗೇ ಕುಗ್ಗಿ ಹೋಗುತ್ತಿದ್ದ.

ಆದರೆ ಮಮತಾ ಬದಲಾಗಿದ್ದಳು. ಮನೆಯಿಂದ ಹೊರಗೆ ಕಾಲಿಟ್ಟ ತಕ್ಷಣ ಅವಳ ನಡಿಗೆಯಲ್ಲಿ ಒಂದು ಚಿಕ್ಕ ಹುಡುಗಿಯ ಉತ್ಸಾಹ ಸೇರಿಕೊಳ್ಳುತಿತ್ತು. ಸಂಸಾರದ ಭಾರ ಪೂರ್ತಿ ಹೆಗಲ ಮೇಲಿಂದ ಇಳಿದಿರುವುದು ಹಾಯೆನ್ನಿಸಿತ್ತು. ಈಗೀಗ ಅವಳು ಆಫೀಸಿನ ಗೆಳತಿಯರೊಡನೆ ಸಂಜೆ ಹೊತ್ತು ಸಿನಿಮಾಗೋ, ರೆಸ್ಟೋರೆಂಟಿಗೋ ಹೋಗುವುದು ಹೆಚ್ಚಾಗಿತ್ತು. ಶಾಪಿಂಗ್ ಮಾಲ್‌ಗಳಿಗೆ ಹೋಗಿ ಹೊಸಹೊಸ ಮಾದರಿಯ ಚೂಡಿದಾರಗಳನ್ನು ಸೀರೆಗಳನ್ನು ಕೊಳ್ಳುವುದು, ಅದನ್ನು ಧರಿಸಿ ಆಫೀಸಿಗೆ ಬಂದಾಗ ಎಲ್ಲರ ಕಾಂಪ್ಲಿಮೆಂಟ್ ಸುರಿಮಳೆ ಖುಷಿ ತರುವುದು ಅವಳಿಗೆ ಸಂಭ್ರಮದ ವಿಷಯವಾಗತೊಡಗಿತ್ತು. ಇದೇನು, ಈಗೀಗ ಮಮತಾ ಎಷ್ಟು ಚಿಕ್ಕವಳಂತೆ, ಹೆಚ್ಚು ಚೆಲುವೆಯಾಗಿ ಕಾಣುತ್ತಾಳಲ್ಲಾ ಎಂದು ರಮೇಶನಿಗೂ ಅನ್ನಿಸತೊಡಗಿತ್ತು. ಮೊದಲೆಲ್ಲಾ, ಸ್ಕೂಲಿನಿಂದ ಬಂದ ಕೂಡಲೇ ಸಿರಿ ಖಾಲಿ ಮನೆಗೆ ಬರಬೇಕಾಗುತ್ತೆ, ಗಂಟೆಗಟ್ಟಳೆ ಕೆಲಸದವಳೊಂದಿಗೆ ಕಳೆಯಬೇಕಾಗುತ್ತದೆ. ಸೇರಲಿ ಬಿಡಲಿ ಅಡಿಗೆಯವಳು ಮಾಡಿದ ಅಡಿಗೆಯನ್ನೇ ಎಲ್ಲರೂ ಸವಿಯಬೇಕಾಗುತ್ತದೆ ಎನ್ನುವ ವಿಷಯಗಳು ತರುತ್ತಿದ್ದ ಅಪರಾಧಿ ಭಾವನೆ ಈಗ ಅವಳಲ್ಲಿ ಮಾಯವಾಗಿತ್ತು. ರಮೇಶನ ಲಾಲನೆ ಪಾಲನೆಯಲ್ಲಿ ಸಿರಿ. ಅವಳು ಇಬ್ಬರೂ ನೆಮ್ಮದಿಯಾಗಿದ್ದರು.

ಈ ಮಧ್ಯೆ ರಮೇಶ ಎರಡು ದಿನ ವಿಪರೀತ ಜ್ವರ ಬಂದು ಮಲಗಿಬಿಟ್ಟ, ಡಾಕ್ಟರ್ ವೈರಲ್ ಫೀವರ್ ಎಂದು ಮಾತ್ರೆ ಕೊಟ್ಟು ಕಳಿಸಿದರು. ಮಮತಾ ರಜಾ ಹಾಕಿದಳು. ಮನೆಯ ಜವಾಬ್ದಾರಿಯ ಹಂಗೇ ತಪ್ಪಿಹೋಗಿದ್ದ ಅವಳಿಗೆ ಎಲ್ಲಾ ತಾನೊಬ್ಬಳೇ ನಿಭಾಯಿ ಸುವುದು ಸಾಕುಸಾಕಾಗಿ ಹೋಯಿತು. ಮುಂದೆ ರಮೇಶ ಕೆಲಸಕ್ಕೆ ಹೋಗಲು ಶುರು ಮಾಡಿದರೆ ತನ್ನ ಗತಿ ಏನು ಎಂದು ನಗು ಬಂದಿತು.

ಒಂದು ಸಂಜೆ ರಮೇಶ ಮನೆಯಲ್ಲಿಲ್ಲದಾಗ ಮಮತಾ ತಿಂಗಳ ಖರ್ಚಿನ ಲೆಕ್ಕ ಎಲ್ಲಾ ಕೂಲಂಕಷವಾಗಿ ನೋಡಿದಳು. ಮೊದಲು ಮನೆ, ಕಾರಿನ ದೊಡ್ಡದೊಡ್ಡ ಇಎಮ್‌ಐಗಳು. ನಂತರ ಸಿರಿ ಸ್ಕೂಲಿನ ಖರ್ಚು. ಇನ್ನು ಮನೆಕೆಲಸದವರ ಸಂಬಳ, ದಿನಸಿ, ತರಕಾರಿ, ಹಾಲು, ತಿರುಗಾಟ ಇತ್ಯಾದಿ. ಎಲ್ಲಾ ಸೇರಿಸಿದರೂ ತನ್ನ ಸಂಬಳವೇ ಎಲ್ಲಕ್ಕೂ ಸಾಕಾಗಿ ಹತ್ತಿಪ್ಪತ್ತು ಸಾವಿರ ಮಿಗುತ್ತಲೂ ಇತ್ತು. ಅದನ್ನು ಅವನಿಗೆ ಹೇಳುವ ಹಾಗೂ ಇಲ್ಲ. ಈಗೀಗ ಪ್ರತಿ ಮಾತಿಗೂ ತನ್ನನ್ನು ಚುಚ್ಚುತ್ತೇನೆಂದೇ ಅಂದುಕೊಳ್ಳುತ್ತಿದ್ದ.

ಇವಳಿಗೆ ಮನೆ ಖರ್ಚಿನ ಲೆಕ್ಕಾಚಾರ ಮಾಡಿದ ಮೇಲೆ ಸ್ವಲ್ಪ ಹಗುರಾಯಿತು. ಹೆಮ್ಮೆಯೆಂತಲೂ ಅನ್ನಿಸಿತು. ಮೊದಮೊದಲಂತೂ ಸಿರಿ ಮಗುವಾಗಿದ್ದಾಗ ಎಂಬಿಎ ಮಾಡುತ್ತಿದ್ದೆನೆಂದು ರಮೇಶ ಮಾತುಮಾತಿಗೂ "ಯು ಆರ್ ಟೂ ಎಂಬಿಶಸ" ಎಂದು ಗುರು ಗುಡುತ್ತಿದ್ದ. ಈಗ ಅದೇ ಎಂಬಿಎ ತಮ್ಮನ್ನು ಕಷ್ಟದಿಂದ ಪಾರು ಮಾಡಿಲ್ಲವೇ? ಅವನು ಕೆಲಸಕ್ಕೆ ಹೋಗದಿದ್ದರೂ ತಮ್ಮ ಬದುಕಿನಲ್ಲಿ ಅಂಥಾ ವ್ಯತ್ಯಾಸ ಏನೂ ಆಗಿಲ್ಲ ಎನ್ನುವ ವಿಷಯ ನೆಮ್ಮದಿ ತಂದಿತು. ಎಷ್ಟು ಹೆಂಗಸರು ಮನೆ, ಮಕ್ಕಳು ನೋಡಿಕೊಂಡು ಖುಷಿಯಾಗಿಲ್ಲ? ಗಂಡಸಾದ ಮಾತ್ರಕ್ಕೆ ಅವಶ್ಯಕತೆ ಇಲ್ಲದಿದ್ದರೂ ಹೊರಗೆ ದುಡಿಯಲೇಬೇಕು. ಮುಖ್ಯವಾಗಿ ಸಂಸಾರದ ನೆಮ್ಮದಿ ಮುಖ್ಯವಲ್ಲವೇ? ಆದರೆ ತನಗೇಕೆ ಅವನಿಗೆ ಹುರಿದುಂಬಿಸುವುದರ ಬಗ್ಗೆ ಅಷ್ಟೊಂದು ಕೀಳರಿಮೆ?

ಅಂದು ಮಮತಾ ಆಫೀಸಿನಿಂದ ಮನೆಗೆ ಬಂದಾಗ ರಮೇಶ ಧುಮುಗುಡುತ್ತಿದ್ದ. ಅವಳು ಬ್ಯಾಗಿಟ್ಟು ಬಟ್ಟೆ ಬದಲಿಸಿ ಬರಲು ಒಳಗೆ ಹೋಗಲೂ ಬಿಡದೆ "ಒಂದು ನಿಮಿಷ "ಕುತ್ಕೋ" ಎಂಬ ಕಟುವಾಗಿ ಅವಳು ಅನುಮಾನಿಸುತ್ತಾ ನಿಂತುಕೊಂಡಳು.

ನಿನಗೆ ಗಿರಿ ಹೇಳಿದ್ದನ್ನು ನನಗ್ಯಾಕೆ ಹೇಳಲಿಲ್ಲ?" ಎಂದಾಗ ಅವನ ಧ್ವನಿ ಗೊಗ್ಗರಾಗಿತ್ತು.

ಈ ನನ್ನ ತಪ್ಪು ಅರಿವಾಗಿ ಮಮತಾ "ಯಾವ ಗಿರಿ..." ಎಂದು ತೊದಲಿದಳು.

"ಇನ್ಯಾವ ಗಿರಿ ನಿನ್ನ ಕಲೀಗ್, ನನ್ನ ಫ್ರೆಂಡ್ ಗಿರಿ. ಇವತ್ತು ಫೋನ್ ಮಾಡಿ ನನ್ನನ್ನು ಚೆನ್ನಾಗಿ ಬೈದ. ನನ್ನ ಭಾವ ತಮ್ಮದೇ ಕಂಪನಿ ಓಪನ್ ಮಾಡಿದ್ದಾರೆ. ಅದರಲ್ಲಿ ನಿನಗೆ ಕೆಲಸ ಕೊಡಲು ಮಾತಾಡಿದ್ದೇನೆ. ತಕ್ಷಣ ಸೇರಿಕೋಬೇಕಂತೆ ಅಂತ ಹೇಳೋಕೆ. ನಿನ್ನ ಫೋನ್ ಎಷ್ಟೋ ಸಲ ಟ್ರೈಮಾಡಿದೆ. ಸ್ವಿಚ್ ಆಫ್ ಆಗಿತ್ತು. ಅದಕ್ಕೇ ಮಮತಾಗೆ ಪರ್ಸನಲ್ ಆಗಿ ಹೇಳಿ ಕಳಿಸಿದೆ. ನಿನಗೇನಾಗಿದೆಯೋ 6 ತಿಂಗಳಾಯಿತು ಕೆಲಸ ಹೋಗಿ, ನಿನಗೆ ಸೋಮಾರಿತನ ಅಭ್ಯಾಸ ಆಗಿಹೋದಂತೆ ಕಾಣುತ್ತೆ. ಹುಂ, ಹಾಗೇಪ್ಪ, ಕೈತುಂಬಾ ಸಂಬಳ ತರುವ ಹೆಂಡತಿಯಿರುವಾಗ ಏನು ಯೋಚನೆ ಅಂದ. ನನಗೆಷ್ಟು ಅವಮಾನ ಆಯ್ತು ಗೊತ್ತ? ಒಂದು ಕಡೆ ಕೈಗೆ ಬಂದಿದ್ದ ಕೆಲಸ ಹೋಯಿತು, ಇನ್ನೊಂದು ಮುಖಕ್ಕೆ ಮಂಗಳಾರತಿ, ನನ್ನ ಗ್ರಹಚಾರ ಜ್ವರ ಬಂದಾಗ ಫೋನ್ ಆಫ್ ಮಾಡಿದ್ದೇ ನನಗೆ ಮುಳುವಾಯಿತು..."

ರಮೇಶ ಎಂದೂ ಅಷ್ಟು ಕಟುವಾಗಿ ಮಾತಾಡಿರಲಿಲ್ಲ.

ಮಯತಾ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕೈ ಸಣ್ಣಗೆ ನಡುಗತೊಡಗಿತು.

ರಮೇಶ್ ನಂಗೆ ಹೇಗೆ ಹೇಳ್ಬೇಕೋ ಗೊತ್ತಾಗ್ತಾ ಇಲ್ಲ... ನಾನು ಮರೆತುಬಿಟ್ಟೆ. ರಮೇಶ್ ಐ ಆಯಾಮ್ ಸಾರಿ... ಫೀಸ್ ಕ್ಷಮಿಸಿ ನನ್ನ ಐ ಆಮ್ ರಿಯಲೀ ಸಾರಿ..."

"ಇಂಥಾ ವಿಷಯ ಹೇಗೆ ಮರೆಯೋಕೆ ಸಾಧ್ಯ?" ಮತ್ತೆ ರಮೇಶನ ಧ್ವನಿ ತಾರಕಕ್ಕೆ ಹೋಗಿ ಕೀಚಲಾಯಿತು.

"ಪ್ಲೀಸ್, ನನ್ನನ್ನು ನಂಬಿ. ಇಟ್ ವಾಸ್ ಎನ್ ಆನೆಸ್ಟ್ ಮಿಸ್ಟೇಕ್, ಬಿಲೀವ್ ಮಿ ರಮೇಶ್.... ನನ್ನನ್ನು ನಂಬಿ...." ಮಮತಾ ಕಳಕಳಿಯಿಂದ ಕೇಳಿಕೊಂಡಳು.

ಸುತ್ತಲೂ ಮೌನ ಆವರಿಸಿತು.

ವಸ್ ಇಟ್ ಎನ್ ಆನೆಸ್ಟ್ ಮಿಸ್ಟೇಕ್? ಅದು ನಿಜವಾಗಿ ತಿಳಿಯದೆ ಮಾಡಿದ ತಪ್ಪು ಆಗಿತ್ತೇ?

ಆ ಪ್ರಶ್ನೆಗೆ ಮಾತ್ರ ಇಬ್ಬರಲ್ಲೂ ಉತ್ತರವಿರಲಿಲ್ಲ.

****

ಮಾರನೆಯ ದಿನ ಬೆಳಗ್ಗೆ ಸಿರೀನ ಬಸ್ ಹತ್ತಿಸಲು ರಮೇಶ ಹೊರಟಾಗ ನ್ಯೂಸ್ ಪೇಪರ್ ಅವನ ಕೈಯ್ಯಲ್ಲಿರಲಿಲ್ಲ. ಅದನ್ನು ಕಂಡ ಸರಸಾ ಅವನೊಡನೆ ಮಾತಾಡಲು ಒಳ್ಳೆ ಅವಕಾಶ ಸಿಕ್ಕಿತೆಂದುಕೊಳ್ಳುತ್ತಾ "ರಮೇಶ್, ನೀವು ಇನ್ನೂ ಮನೆಯಿಂದಲೇ ಕೆಲಸ ಮಾಡ್ತಿದೀರಾ?" ಎಂದು ಕೇಳಿದಳು.

"ಇಲ್ಲ, ನನಗೆ ಕೆಲಸ ಹೋಗಿ ಆರು ತಿಂಗಳಾಯಿತು. ಇನ್ನೂ ಸಿಕ್ಕಿಲ್ಲ" ಎಂದು ರಮೇಶ್ ನಿರ್ಲಿಪ್ತನಾಗಿ ಹೇಳಿದ.

'ನೇಸರು' ಓದುಗರಿಗೆ
ಹೊಸ ವರ್ಷ (2026)
ಹಾಗೂ
ಮಕರ ಸಂಕ್ರಾಂತಿಯ
ಹಾರ್ದಿಕ
ಶುಭಾಶಯಗಳು.

ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಮತ್ತು ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಮುಂಬೈ ವ್ಯಾಸರಾಯ ಬಲ್ಲಾಳ ಪ್ರಶಸ್ತಿ ಪ್ರದಾನ ಮತ್ತು ಸಾಹಿತ್ಯ ಸಂವಾದ ಕಾರ್ಯಕ್ರಮ

ಮುಂಬೈ ಒಂದು ಬಹುಭಾಷಿಕ ನಗರ. ಇದು ಸ್ವಾತಂತ್ರ್ಯದ ಅನುಭವ ನೀಡುವ ನಗರವೂ ಹೌದು. ಬಲ್ಲಾಳರ ಕತೆ, ಕಾದಂಬರಿಗಳ ಮೂಲಕ ಮುಂಬೈಗೆ ಕಾಲಿಡುವ ಮುನ್ನವೇ ಪ್ರವೇಶಿಸಿದ್ದೇನೆ. ಎಪ್ಪತ್ತರ ದಶಕದಲ್ಲಿ ಹದಿನೆಂಟು ಕನ್ನಡ ಮಾಧ್ಯಮ ರಾತ್ರಿ ಶಾಲೆಗಳಿದ್ದವು. ಇಲ್ಲಿ ಕಲೆಕ್ಟಿವ್ ಪೇರೆಂಟಿಂಗಿನ (ಸಾಮೂಹಿಕ ಪಾಲನೆಯ) ಅನುಭವವಾಗುತ್ತದೆ. ಇಲ್ಲಿ ಹುಟ್ಟಿದವರಿಗೆ ಗೊತ್ತಿರದ ಅನುಭವ ಹೊರಗಿನಿಂದ ವಲಸೆ ಬಂದವರಿಗೆ ಗೊತ್ತಿರುತ್ತದೆ. ಮುಂಬೈ ಕನ್ನಡ ಕುಟುಂಬ ಸಾಮಾಜಿಕ ಋಣದ ಕುಟುಂಬ. ಹಿರಿಯರ ಋಣದಲ್ಲಿ ನಾವು ಬೆಳೆದಿದ್ದೇವೆ. ಇಂದು ನಾವು ಅನೇಕ ಬರಹಗಾರರ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ದಿನಕರ ದೇಸಾಯಿ, ವಿ.ಜಿ. ಭಟ್ಟ ಅವರು ಮೊದಲ ಬಂಡಾಯ ಕವಿಗಳು. ಬಲ್ಲಾಳ, ಚಿತ್ತಾಲ, ಕಟ್ಟೀಮನಿ, ನಿರಂಜನ ಮೊದಲಾದವರದು ಸಮಾಜಶೀಲ ಬರೆವಣಿಗೆ. ಮಿತ್ರಾ ವೆಂಕಟ್ರಾಜ್ ಅವರಿಗೆ ಬಲ್ಲಾಳ ಪ್ರಶಸ್ತಿ ಸಂದಿರುವುದು ಮತ್ತು ಅವರ ಉಪಸ್ಥಿತಿ ಇರುವುದು ಸಂತಸದ ಸಂಗತಿ ಎಂದು ಹಿರಿಯ ಕವಿ, ಲೇಖಕ ಜಯಂತ ಕಾಯ್ಕಿಣಿ ನುಡಿದರು. ಅವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಮತ್ತು ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಮುಂಬೈ ಇದರ ಸಂಯುಕ್ತ ಆಶ್ರಯದಲ್ಲಿ ಡಿ. 3ರಂದು ವಿದ್ಯಾನಗರಿ ಕಲೀನಾ ಕ್ಯಾಂಪಸ್‌ನ ಜೆ. ಪಿ. ನಾಯಕ್ ಭವನದಲ್ಲಿ ನಡೆದ ವ್ಯಾಸರಾಯ ಬಲ್ಲಾಳ ಪ್ರಶಸ್ತಿ ಪ್ರದಾನ ಮತ್ತು ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು

ಬದುಕನ್ನು ತಿಳಿದುಕೊಳ್ಳುವುದಕ್ಕೆ ಮಾಡಿಕೊಂಡಿರುವುದೇ ಸಾಹಿತ್ಯ. ಜೀವನಕ್ಕಿರುವ ಪಥ್ಯವೇ ಸಾಹಿತ್ಯ. ಸಾಹಿತ್ಯವು ನಮ್ಮ ಬದುಕಿನ ಪರೀಕ್ಷೆಗಳಿಗೆ ನಮ್ಮನ್ನು ಅಣಿಗೊಳಿಸುತ್ತದೆ. ಹಿಂದೆ ಪ್ರಕಟಗೊಳ್ಳುತ್ತಿದ್ದ ಬರೆಹಗಳಲ್ಲಿ ಗುಣಮಟ್ಟದ ನಿಯಂತ್ರಣವಿರುತಿತ್ತು. ಇಂದಿನ ಬರೆಹಗಾರರು ಇತರರ ಬರೆಹಗಳನ್ನು ಓದದೇ ಬರೆಯುತ್ತಿರುವುದು ಅತ್ಯಂತ ಬೇಸರದ ಸಂಗತಿ. ಈಗ ಪ್ರಕಟಣಕಾರ್ಯ ಸುಲಭವಾಗಿದೆ. ಇದು ಒಂದು ರೀತಿಯಲ್ಲಿ ಶರವೇಗದಲ್ಲಿ ಸಾಹಿತ್ಯದಲ್ಲಿ ನಡೆಯುತ್ತಿರುವ ಸಾರ್ವತ್ರಿಕ ಅಧಃಪತನ. ಗಂಗಾಧರ ಚಿತ್ತಾಲರು ಕೇವಲ ಎಪ್ಪತ್ತೆರಡು ಕವಿತೆಗಳನ್ನು ಬರೆದು ಕನ್ನಡದ ಅಗ್ರಮಾನ್ಯ ಕವಿಗಳಲ್ಲಿ ಗುರುತಿಸಿಕೊಂಡವರು. ಅವರ ಕವಿತೆಗಳಲ್ಲಿ ಶಬ್ದಸಂಗೀತ, ಭಾವಸಾಂದ್ರತೆ, ಚಿಂತನಶೀಲತೆ, ಅನುಭವದ ಪ್ರಾಮಾಣಿಕತೆ ಇರುತ್ತದೆ. ಅರವಿಂದ ನಾಡಕರ್ಣಿ ಅವರ ಕವಿತೆಗಳಲ್ಲಿ ಯಾಜಮಾನ್ಯ ಸಂಸ್ಕೃತಿಯ ಬಗ್ಗೆ ಬೇಸರ ಇರುವುದನ್ನು ಕಾಣಬಹುದು. ಇಲ್ಲಿನ ಕವಿತೆಗಳಲ್ಲಿ ನಾಟಕೀಯ ಶೈಲಿಯ ಕನ್ನಡದೊಂದಿಗೆ ಹಿಂದಿ ಮರಾಠಿ ಪದಗಳ ಮುಂಬೈ ಟೋನ್ ಇರುತ್ತದೆ ಎಂದು ಅವರು ಈ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು ಆದ ಪ್ರೊ. ಜಿ. ಎನ್. ಉಪಾಧ್ಯ ಅವರು ಮಾತನಾಡುತ್ತಾ, ಕನ್ನಡದ ಶ್ರೇಷ್ಠ ಕತೆಗಾರ ವ್ಯಾಸರಾಯ ಬಲ್ಲಾಳ ಅವರು ಮುಂಬೈ ಕನ್ನಡಿಗರ ಭಾಗ್ಯ. ವ್ಯಾಸರಾಯ ಬಲ್ಲಾಳ ಅವರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿ ಅತ್ಯಂತ ಮಹತ್ವದ್ದು. ಮೈಸೂರು ಮಂಗಳೂರು ಧಾರವಾಡ ವಲಯದ ಬಳಿಕ ಮುಂಬೈಯಲ್ಲೊಂದು ಕನ್ನಡ ವಲಯ ಬೆಳೆದು ಬಂತು. ಇದಕ್ಕೆ ರಾ. ಹ. ದೇಶಪಾಂಡೆ, ಬಲ್ಲಾಳರಂತಹ ಹಿರಿಯರನೇಕರು ಕಾರಣ. ಬಲ್ಲಾಳರು ಕನ್ನಡ ಸಂಘದ ಬೇರೆ ಬೇರೆ ಜವಾಬ್ದಾರಿಯನ್ನು ವಹಿಸಿ ಕನ್ನಡದ ಅಭಿವೃದ್ಧಿಯಲ್ಲಿ ದೊಡ್ಡ ಪಾತ್ರವನ್ನು ನಿರ್ವಹಿಸಿದವರು. ಕಾಲಕಾಲಕ್ಕೆ ವಿಭಾಗಕ್ಕೆ ಮಾರ್ಗದರ್ಶನ ನೀಡಿದವರು. ಕನ್ನಡ ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸುವ ಜಯಂತ ಕಾಯ್ಕಿಣಿ ಅವರು ಕನ್ನಡದ ಕಣ್ಬೆಳಕು. ಅವರು ತಮ್ಮ ಕತೆಗಳಲ್ಲಿ ಕಟ್ಟಿ ಕೊಡುವ ರೂಪಕಗಳು ಅತ್ಯದ್ಭುತ. ಕನ್ನಡದ ಗದ್ಯಸಾಹಿತ್ಯಕ್ಕೆ ಹೊಸ ಆಯಮವನ್ನು ನೀಡಿದ ಕಾಯ್ಕಿಣಿ ಅವರು ಚೈತನ್ಯ ಮೂರ್ತಿ. ಜೀವನದೃಷ್ಟಿಯನ್ನು ತಿದ್ದುವ, ಬದುಕಿನ ವಾಸ್ತವದರ್ಶನವನ್ನು ತಮ್ಮ ಮಾತು ಕೃತಿಗಳಲ್ಲಿ ಮಾಡಿಕೊಟ್ಟವರು ಜಯಂತ ಕಾಯ್ಕಿಣಿ. ವಿಭಾಗದಲ್ಲಿ ಈವರೆಗೆ ನೂರ ಹದಿನೈದು ಕೃತಿಗಳು ಪ್ರಕಟಗೊಂಡಿವೆ. ಕನ್ನಡದ ದೀಕ್ಷೆ ಕೊಡುವ, ದೀಪದಿಂದ ದೀಪ ಹಚ್ಚುವ ಕೆಲಸ ವಿಭಾಗ ಮಾಡುತ್ತಿದೆ ಎಂದರು. ವ್ಯಾಸರಾಯ ಬಲ್ಲಾಳ ಪ್ರಶಸ್ತಿಗೆ ಭಾಜನರಾದ ಹಿರಿಯ ಕಥನಕಾರರಾದ

ಮಿತ್ರಾ ವೆಂಕಟ್ರಾಜ್, ವ್ಯಾಸರಾಯ ಬಲ್ಲಾಳ ಶ್ರೇಷ್ಠ ವಿದ್ಯಾರ್ಥಿ ಪುರಸ್ಕೃತ ಶ್ಯಾಮಲಾ ಉಚ್ಚಿಲ್ ಮತ್ತು ವಿಭಾಗದ ವಿಶೇಷ ಸಾಧಕರನ್ನು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಿದರು.

2024–25ನೆಯ ಸಾಲಿನ ವ್ಯಾಸರಾಯ ಬಲ್ಲಾಳ ಪ್ರಶಸ್ತಿಯನ್ನು ಹಿರಿಯ ಲೇಖಕಿ ಮಿತ್ರಾ ವೆಂಕಟ್ರಾಜ್ ಅವರಿಗೆ ಪ್ರದಾನಿಸಿ ಶಾಲು ಹೊದಿಸಿ ಫಲ ನೀಡಿ ಪ್ರಶಸ್ತಿ ಫಲಕಗಳನ್ನಿತ್ತು ಗೌರವಿಸಲಾಯಿತು.

ವ್ಯಾಸರಾಯ ಬಲ್ಲಾಳ ಪ್ರಶಸ್ತಿ ಸ್ವೀಕರಿಸಿದ ಮಿತ್ರಾ ವೆಂಕಟ್ರಾಜ್ ಅವರು ಮಾತನಾಡುತ್ತಾ, ತಮ್ಮ ಕಾವ್ಯದಿಂದ, ಕತೆಗಳಿಂದ, ನಡೆ–ನುಡಿಗಳಿಂದ ನಮ್ಮೆಲ್ಲರ ಮನೆ ಮನಗಳನ್ನು ಗೆದ್ದವರು ಜಯಂತ್. ಅವರ ವ್ಯಕ್ತಿತ್ವದ ತಾಜಾತನ ಹಾಗೆಯೇ ಇರಲಿ. ನನ್ನ ಕತೆಗಳಿಗೆ ಕುಂದಾಪುರ ಮತ್ತು ಮುಂಬೈ ನಗರ ಎರಡರ ದೇಣಿಗೆ ಇದೆ. ಬದುಕನ್ನು ನೋಡುವ ನನ್ನ ದೃಷ್ಟಿಯು ನನ್ನ ಕತೆಗಳಲ್ಲಿ ಅನಾವರಣಗೊಂಡಿದೆ. ಕತೆ ಬರೆಯುವುದೆಂದರೆ ತೀರ ವೈಯುಕ್ತಿಕ ಪ್ರಕ್ರಿಯೆ. ಅದಕ್ಕೆ ಧ್ಯಾನಸ್ಥ ಸ್ಥಿತಿ ಬೇಕು. ಕತೆ ಕೊಡುವ ತೃಪ್ತಿ ಅಮೂಲ್ಯವಾದದ್ದು. ಪ್ರಶಸ್ತಿಗಳು ಓದುಗರ ಸಾಮೂಹಿಕ ಮೆಚ್ಚುಗೆಯ ದ್ಯೋತಕವಾಗಿ ಬರುತ್ತದೆ. ಅದು ನನಗೆ ಸಾರ್ಥಕ ಭಾವನೆಯನ್ನು ನೀಡುತ್ತದೆ. ವ್ಯಾಸರಾಯ ಬಲ್ಲಾಳರು ಸಮರ್ಥ ಸ್ತ್ರೀಪಾತ್ರಗಳನ್ನು ಸೃಷ್ಟಿಸಿದವರು. ಬಲ್ಲಾಳರ ಹೆಸರಿನ ಪ್ರಶಸ್ತಿ ಮನೆಯ ಹಿರಿಯರ ಆಶೀರ್ವಾದದಂತೆ. ಇದನ್ನು ಮನಃಪೂರ್ವಕವಾಗಿ ಶಿರಸಾ ಸ್ವೀಕರಿಸುತ್ತೇನೆ ಎಂದು ನುಡಿದು ಬಲ್ಲಾಳ ಕುಟುಂಬದ ಒಡನಾಟದ ನೆನಪುಗಳನ್ನು ಹಂಚಿಕೊಂಡರು. ವಿಭಾಗದ ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು ಅಭಿನಂದನ ನುಡಿಗಳನ್ನಾಡಿದರು. ರಂಗಕಲಾವಿದೆ ಅಹಲ್ಯಾ ಬಲ್ಲಾಳ ಅವರು ಗಂಗಾಧರ ಚಿತ್ತಾಲ ಅವರ ಕವಿತೆಯನ್ನು ಮತ್ತು ಸಂಶೋಧನ ವಿದ್ಯಾರ್ಥಿ ಅನಿತಾ ಪೂಜಾರಿ ತಾಕೋಡೆ ಅವರು ಅರವಿಂದ ನಾಡಕರ್ಣಿ ಅವರ ಕವಿತೆಯನ್ನು ವಾಚಿಸಿದರು.

ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಕೊಡಮಾಡುವ ವರ್ಷದ ಶ್ರೇಷ್ಠ ವಿದ್ಯಾರ್ಥಿ ಪ್ರಶಸ್ತಿಯನ್ನು ವಿಭಾಗದ ಎಂ. ಎ. ವಿದ್ಯಾರ್ಥಿ ಶ್ಯಾಮಲಾ ಉಚ್ಚಿಲ್ ಅವರಿಗೆ ಶಾಲು, ಕೃತಿಯೊಂದಿಗೆ ಗೌರವಧನ ನೀಡಿ ಪುರಸ್ಕರಿಸಲಾಯಿತು.

ಇದೇ ಸಂದರ್ಭದಲ್ಲಿ ವಿಭಾಗದ ಸಂಶೋಧನ ವಿದ್ಯಾರ್ಥಿಗಳಾದ– ಶಿವಮೊಗ್ಗ ಕನ್ನಡ ಸಂಘ ಕೊಡಮಾಡುವ ಎಂ. ಕೆ. ಇಂದಿರಾ ಪ್ರಶಸ್ತಿ ಭಾಜನರಾದ ಪ್ರತಿಭಾ ರಾವ್, ತಮ್ಮ ಮೇಣಕ್ಕಂಟಿದ ಬತ್ತಿ ಕವನಸಂಕಲನಕ್ಕೆ ಬಳ್ಳಾರಿಯ ಗವಿಸಿದ್ಧ ಎನ್ ಬಳ್ಳಾರಿ ಕಾವ್ಯ ಪ್ರಶಸ್ತಿ ಪಡೆದ ಅನಿತಾ ಪೂಜಾರಿ ತಾಕೋಡೆ ಮತ್ತು ವಿ.ಸೀ. ಸಂಸ್ಮರಣೆಯ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಿದ ಕಲಾ ಭಾಗ್ವತ್ ಅವರನ್ನು ಗೌರವಿಸಲಾಯಿತು.

ವಿಭಾಗದ ಹಿರಿಯ ವಿದ್ಯಾರ್ಥಿ ದುರ್ಗಪ್ಪ ಕೋಟಿಯವರ್ ಅವರು ಡಾ. ಜಿ ಎನ್ ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ತಮ್ಮ ಪಿಎಚ್.ಡಿ ಮಹಾಪ್ರಬಂಧದ ಕೃತಿರೂಪವಾದ ಮುಂಬಯಿ ಗದ್ಯ ಸಾಹಿತ್ಯ ಪುಸ್ತಕವನ್ನು ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿದರು.

ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನದ ಪರವಾಗಿ ಕಲಾವಿದೆ ಕುಸುಮಾ ಬಲ್ಲಾಳ ಉಪಸ್ಥಿತರಿದ್ದರು. ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಹಿರಿಯ ಲೇಖಕಿ ಶ್ಯಾಮಲಾ ಮಾಧವ, ಸ್ಮಿತಾ ಕಾಯ್ಕಿಣಿ, ಯು. ವೆಂಕಟ್ರಾಜ್ ರಾವ್, ದೇವದಾಸ್ ಶೆಟ್ಟಿ, ಮೋಹನ್ ಮಾರ್ನಾಡ್, ಅಮಿತಾ ಭಾಗ್ವತ್, ಎಸ್. ಕೆ. ಸುಂದರ್, ನಾರಾಯಣ ರಾವ್ ಮೊದಲಾದ ಗಣ್ಯರು, ವಿಭಾಗದ ವಿದ್ಯಾರ್ಥಿಗಳು, ಮತ್ತಿತರ ಸಾಹಿತ್ಯಾಸಕ್ತರು ಹಾಜರಿದ್ದರು.

ನೇಸರು

ಅಂದದ ಚಂದದ ನೇಸರು ನೀನು,
ಜ್ಞಾನ ಕಿರಣಗಳ ಬೀರುವ ನೀನು,
ಮೂರ್ತಿ ಚಿಕ್ಕದಾದರೂ ನಿನ್ನ ಕೀರ್ತಿ
ಹಿರಿದಲ್ಲವೇನು??
ಚಂದದ" ಚಂದನವನ"ದ ಘಮಲು ಬೀರುತ್ತಾ,
ಕರ್ನಾಟಕದ ಹಿರಿಮೆಯ ಸಾರುತ್ತಾ,
ಸಾಹಿತ್ಯ, ಸಾಂಸ್ಕೃತಿಕ,ಸಂಪ್ರದಾಯದ
ಸುಮಧುರ ಸುನಾದಮಯ..ನಾದಲೋಕದಿ
ವಿಹರಿಸುವ..ಅನುಭವ ನೀಡುತ್ತಾ,
ಓದುಗರೆದೆಯ" ವೈಜಯಂತಿ"
ಮಾಲೆ ಯಾದ ನಿನಗೆ..

– ಸುಮನಾ.

ಪ್ರಕೃತಿ ಪರಿಸರ

ಓ ಮನುಜನೆ ಮರೆಯದಿರು ಪಕೃತಿಯ
ಮರೆತು ಬದುಕು ನೀನು ವಿಕೃತಿಯ
ಇದ್ದಲ್ಲೇ ಬೆಳೆಸು ಒಂದೆರಡು ಗಿಡಮರಗಳನು
ನೀರೆರೆದು ಪ್ರೀತಿಯಲ್ಲಿ ಪೋಷಿಸು ಅದನು
ಕಂಡಕಂಡಲ್ಲಿ ಕಸವೆಸೆದು ಅವಮಾನಿಸದಿರು
ಅವನಿಯ ವಿಂಗಡಿಸಿ ಕಸವ ಮಾಡು ಸಹಾಯ
ಕೊಂಚ ಶ್ರಮವಹಿಸಲು ಕಸವೆ ರಸವಾಗುವುದು
ಗಿಡಮರಗಳ ಬುಡಕೆ ಹಾಕಲು ಗೊಬ್ಬರವಾಗುವುದು
ಅಗತ್ಯಕೆ ಮರ ಕಡಿವುದು ಅನಿವಾರ್ಯವು
ಆಗಲಿ ಕಡಿದೆಡೆ ಸಸಿ ನೆಡುವ ಕಾರ್ಯವು
ಮನಸ್ಸಿದ್ದರೆ ನೋಡು ಮಾಡಾಗುವುದು ಕಾಡು
ನಲಿಯಲಿ ಹಸಿರು ನಗುತಿರಲಿ ನಾಡು

– ಅನುಪಮ ಅರುಲಿಕೆ

ಒಂದು ಲಾಂಗ್ ಡ್ರೈವ್

✍ ಜ್ಯೋತಿ ಆರ್.

ಸೌಮ್ಯಳ ಮಾಸ್ಟರ್ ಡಿಗ್ರಿ ಈಗಷ್ಟೇ ಮುಗಿದಿದೆ. ಅವಳಿಷ್ಟದಂತೆ ಕನ್ನಡ ಸಾಹಿತ್ಯದಲ್ಲಿ ಡಾಕ್ಟರೇಟ್ ಮಾಡಲು ಸೀಟ್ ಸಿಗದ ಕಾರಣ ಒಂದೆರಡು ಕಾಲೇಜುಗಳಲ್ಲಿ ಪಾರ್ಟ್ ಟೈಂ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಾ ತನ್ನ ಜೀವನೋಪಾಯ ನೋಡಿಕೊಳ್ಳುತ್ತ ತಾನಿರುವ ಅನಾಥಾಶ್ರಮದಲ್ಲಿ ಕಾಲಯಾಪನೆ ಮಾಡುತ್ತಿದ್ದಾಳೆ.

ಅವಳಿಗಿದೆ. ಸೌಮ್ಯ ನೋಡಲು ತುಸು ಕಪ್ಪಾದರೂ ಲಕ್ಷಣವಾಗಿರುವ ಹೆಣ್ಣು ಮಗಳು ಮಟ್ಟಸವಾದ ಎತ್ತರ ಹಾಗೂ ಅಂಗ ಸೌಷ್ಟವ, ಆತ್ಮ ವಿಶ್ವಾಸದ ನಗುವಿರುವ ಅವಳ ಮುಖವನ್ನು ಯಾರಾದರೂ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುವುದು. ಸರಳವಾದ ಹತ್ತಿ ಉಡುಪುಗಳು ಅವಳಿಗಿಷ್ಟ ಮಿತಭಾಷಿ. ಸಾಹಿತ್ಯದ ಅಧ್ಯಯನ ಮಾಡಿರುವುದರಿಂದ ತನ್ನದೇ ಆದ ಮೃದು ಭಾವಗಳಿಗೆ ಒತ್ತು ಕೊಡುತ್ತಾಳೆ. ಡಾ.ಸಿ.ಆರ್. ಚಂದ್ರಶೇಖರ್ ಅವರು ಬರೆದಿರುವ ಅನೇಕ ವೈದ್ಯಕೀಯ ಲೇಖನಗಳನ್ನು ಓದಿ ಮನೋವಿಜ್ಞಾನದ ಬಗ್ಗೆಯೂ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗೆ ಚಿಂತನೆ ನಡೆಸಬಲ್ಲ ಶಕ್ತಿ ಹೋಗಬಹುದಾಗಿದ್ದರೂ ತಾನು ಚಿಕ್ಕಂದಿನಿಂದ ಬೆಳೆದ ಆಶ್ರಮದಲ್ಲಿ ಈಗ ಹಲವು ವೃದ್ಧರೂ ಇರುವುದರಿಂದ ಸೌಮ್ಯ ಅವರ ಆರೈಕೆಯನ್ನೂ ನೋಡಿಕೊಳ್ಳುತ್ತ, ದಕ್ಷಿಣ ಕನ್ನಡದ ಕರಾವಳಿ ಭಾಗದಲ್ಲಿರುವ 'ಮಿಡಿವ ಹೃದಯ' ಮಹಿಳಾ ಸೇವಾ ಸದನ ಆಶ್ರಮದಲ್ಲೇ ತನ್ನ ಪಾಲಿನ ಕರ್ತವ್ಯ ನಿರ್ವಹಿಸುತ್ತ ಯೌವ್ವನದ ಆಸೆ ಕಂಗಳಲ್ಲಿ ತನ್ನ ಭವಿಷ್ಯವನ್ನೂ ಕಟ್ಟಿಕೊಳ್ಳುತ್ತಿದ್ದಾಳೆ, ಆಶ್ರಮದಲ್ಲಿ ಎಲ್ಲರಿಗೂ ಅವಳೆಂದರೆ ಅಚ್ಚುಮೆಚ್ಚು ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ –ತಂಗಿಯರ ಜೊತೆ ಮನೆಯ ವಾತಾವರಣದಲ್ಲಿ ಬೆಳೆದು ಗೊತ್ತೇ ಇರದ ಸೌಮ್ಯಳಿಗೆ ಆಶ್ರಮವೇ ಮನೆಯಾಗಿದೆ. ಅಲ್ಲಿ ಬೆಳೆಯುತ್ತಾ ಏನು ಕಲಿತಳೋ ಅದೇ ಅವಳ ಆಸ್ತಿ ಮತ್ತು ಒಳನೋಟಗಳು, ತಾಯಿಮಡಿಲಲ್ಲಿ ಬೆಚ್ಚಗೆ ಮಲಗಿಕೊಂಡು ಹಾಲು ಕುಡಿದು ಬೆಳೆಯಲಿಲ್ಲ. ಕೌಟುಂಬಿಕವಾದ ಶಾಸ್ತ್ರೋಕ್ತವಾದ ಯಾವ ಆಚಾರ ವಿಚಾರಗಳೂ ಅವಳಿಗೆ ಗೊತ್ತಿಲ್ಲ. ಆದರೂ ತಾನೊಂದು ಹೆಣ್ಣು, ತನ್ನನ್ನು ಸಂಪೂರ್ಣವಾಗಿ ಪ್ರೀತಿಸುವ ಗಂಡಿಗೆ ಮಾತ್ರ ತನ್ನನ್ನು ತೆತ್ತುಕೊಳ್ಳಬೇಕು ಮತ್ತು ಜೀವನ ಸಂಗಾತಿಯಾಗಿ ಬಾಳಬೇಕು ಎಂಬ ಕನಸು ಅವಳಿಗಿದೆ. ಅವಳನ್ನು 'ಕನಸು ಕಂಗಳ ಹುಡುಗಿ' ಎಂದರೂ ತಪ್ಪಾಗಲಿಕ್ಕಿಲ್ಲ.

ಅನಾಥಾಶ್ರಮವೆಂಬುದು ಯಾಕಾದರೂ ಸೃಷ್ಟಿಯಾಗುತ್ತದೋ ಎಂದು ನೆನೆದು ಅವಳಿಗೆ ಒಮ್ಮೊಮ್ಮೆ ಕಂಬನಿ ಒಸರುತ್ತದೆ. ಮಗುವಿಗೆ ತಂದೆ ಹೊರಲಾಗದ – ವಾತ್ಸಲ್ಯ ಉಣಿಸಲಾಗದ ಗಂಡು ತಾಯಿಗಳಾಗಿ ಜವಾಬ್ದಾರಿ ಹೆಣ್ಣು ಅದ್ಯಾಕಾದರೂ ಹೀಗೆ ದುಡುಕಿ ನಮ್ಮಂಥ ಅನಾಥರನ್ನು ಸೃಷ್ಟಿಸಿಬಿಡುತ್ತಾರೋ!... ದೇವರೇ, ಇನ್ನು ಮುಂದೆ ಅನಾಥರಿ: ಇಲ್ಲದಂತೆ ಈ ಪ್ರಪಂಚವನ್ನು ಸುಂದರವಾಗಿಸು ಎಂದು ಎಲ್ಲರೊಡನೆ ಕೂತು ಪ್ರಾರ್ಥನೆ ಮಾಡುವಾಗ ಆಶ್ರಮದ ಅಂಗಳದಲ್ಲಿರುವ ಗಣೇಶನನ್ನು ಬೇಡಿಕೊಳ್ಳುತ್ತಾಳೆ. ಗಣೇಶನ ಕಣ್ಣುಗಳಲ್ಲಿ ಇವಳೆಡೆಗೆ ಎಂಥದ್ದೋ ವಾತ್ಸಲ್ಯ ಭಾವ ಫಳ ಫಳನೆ ಹೊಳೆದಂತಾದಾಗ ಇವಳಿಗೇನೋ ಸಮಾಧಾನ. ಅಪ್ಪ, ಅಮ್ಮ, ಅಕ್ಕ–ತಂಗಿಯರ ಬಗ್ಗೆ ಹೊರಗಿನ ಗೆಳತಿಯರು ಹೇಳುವಾಗಲೆಲ್ಲ ಸೌಮ್ಯಳಿಗೆ ತನಗೂ ಅಂಥ ಒಂದು ಜೀವನವಿದ್ದಿದ್ದರೆ ಎಂದು ಅನಿಸುತ್ತದೆ. ಆದರೆ ಇಲ್ಲ. ಆದ್ದರಿಂದ ತನ್ನ ಜೀವನವನ್ನು ಹಾಗೆ ರೂಪಿಸಿಕೊಳ್ಳಬೇಕೆಂಬುದೇ ಅವಳ ಗುರಿಯಾಗುತ್ತದೆ.

ಸೌಮ್ಯಳ ಕೆಲವು ಸಹಪಾಠಿ ಗೆಳತಿಯರು ಆಶ್ರಮವನ್ನು ಬಿಟ್ಟು ಸ್ವಂತ ಬಾಡಿಗೆ ಮನೆ ಮಾಡಿಕೊಳ್ಳುವುದೋ ಅಥವಾ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗೆ ಹೋಗುವುದೋ ಮಾಡಿ ಆಶ್ರಮವನ್ನು ಬಿಟ್ಟಿದ್ದಾರೆ. ಸೌಮ್ಯ ಒಬ್ಬಳೇ ಈಗ ಅವಳ ಕೊಠಡಿಯಲ್ಲಿ. ತನ್ನೊಡನೆ ತಾನೇ ಸಂಭಾಷಿಸಲು ಕನಸು ಕಾಣಲು ಸಾಕಷ್ಟು ಸ್ಪೇಸ್ ಇದೆ! ಜೊತೆಗೆ ಮೌನವಾಗಿದ್ದು ಮಾತಿನ ಗಾಂಭೀರ್ಯ ಅರಿಯುವುದಕ್ಕೂ ಅವಳ ಕೊಠಡಿಯಲ್ಲಿ ಕಿಟಕಿಗೆ ಆತುಕೊಂಡಂತೆ ಒಂದು ಮರದ ಮೇಜು. ಅದರ ಮೇಲೊಂದು ಹೂ ದಾನಿ. ಅದರಲ್ಲಿ ಪ್ರತಿದಿನ ಆಶ್ರಮದಲ್ಲಿರುವ ತೋಟದಲ್ಲಿ ಬಿಡುವ ಬಗೆ ಬಗೆಯ ಹೂವುಗಳನ್ನು ತಂದು ಜೋಡಿಸಿ ಖುಷಿಪಡುವಳು. ಅಷ್ಟೇ ಅಲ್ಲ, ಅಲ್ಲಿರುವ ಹಲವು ವಯಸ್ಸಾದ ಹೆಂಗಸರ ಕೊಠಡಿಗಳಲ್ಲೂ ಹೀಗೆ ಹೂ ದಾನಿಯಲ್ಲಿ ಹೂಗಳನ್ನಿಟ್ಟು ಅವರ ಮುಖದಲ್ಲಿ ನಗು ತರಿಸುವ ಕೆಲಸ ಮಾಡುವಳು. ಅವರಲ್ಲಿ ಕೆಲವರು ಮಗ– ಸೊಸೆ ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಅನಾಥ ಪ್ರಜ್ಞೆಯಿಂದ ನರಳಿ ಆಶ್ರಮ ಸೇರಿದವರೂ ಉಂಟು. ಗಂಡನಿಲ್ಲದ ವಿಧವೆಯರು, ಗಂಡನಿಂದ ಮೋಸ ಹೋದವರು, ಹೀಗೆ ವಿವಿಧ ರೀತಿಯ ಶೋಷಣೆಗೊಳಗಾದ ಹೆಂಗಸರನ್ನು ಆ ಸೇವಾ ಸದನ ತನ್ನ ಬಾಹುಗಳೊಳಗೆ ಇಟ್ಟುಕೊಂಡು ತಾಯಿಯಂತೆ ಸಲಹುತ್ತಿದೆ. ಸೌಮ್ಯಳಿಗೆ ಅನೇಕ ಬಾರಿ ಆ ಹಿರಿಯ ಹೆಂಗಸರಿಂದ ಅನುಭವ ಪಾಠಗಳು ಸಿಕ್ಕಿ ಅವಳ ಜ್ಞಾನ ವಿಕಸನವಾಗಿದೆ. ಆ 'ಸದನ' ವನ್ನು ಸಲಹಲು ಬೇಕಾದ ಆರ್ಥಿಕ ಸವಲತ್ತುಗಳಿಗೆ ಚಂದಾ ಎತ್ತಲು ಎಷ್ಟೋ ಬಾರಿ ಅವಳು ಮನೆ ಮನೆಗೆ ಹೋಗಿ ಸಹಾಯ ಕೇಳುವುದಿದೆ. ಕೆಲವರು ಅಪರೂಪಕ್ಕೆ ಉದಾರ ಧನ ಸಹಾಯ ಮಾಡಿದರೆ ಮತ್ತೆ ಕೆಲವರು ಇವಳನ್ನು ಸಂಶಯದ ಕಣ್ಣುಗಳಿಂದ ನೋಡಿ ಇಲ್ಲವೆಂದು ಹೇಳುತ್ತಾ ಬಾಗಿಲು ಹಾಕುವುದೂ ಇದೆ. ಆಗೆಲ್ಲ ಸೌಮ್ಯ ಮತ್ತೆ ಮತ್ತೆ ಅನಾಥ ಪ್ರಜ್ಞೆ ಅನುಭವಿಸುತ್ತಾಳೆ. "ದೇವರೇ ಜಗತ್ತಿನಲ್ಲಿ ಅನಾಥರನ್ನು ಸೃಷ್ಟಿಸದಿರು. ಎಲ್ಲರೂ ಅವರವರ ಹಣವನ್ನು ಗೌರವದಿಂದ ದುಡಿಯುತ್ತಾ ಸ್ವಾವಲಂಬೀ ಜೀವನ ಬದುಕುವಂತಾಗಲಿ". ಇದು ಅವಳ ನಿತ್ಯ ಮೊರೆ. ಸೌಮ್ಯ ಆಶ್ರಮದ ಕಾನೂನಿಗೆ

ಗೌರವ ತೋರಿ ನಡೆದುಕೊಳ್ಳುವಳು. ಸೀರೆ ಅಥವಾ ಚೂಡಿದಾರ್ ಥರದ ಉಡುಪುಗಳನ್ನು ಮಾತ್ರ ಧರಿಸುವಳು. ಧರಿಸುತ್ತ ಧರಿಸುತ್ತ ಅವೇ ಅವಳಿಗೆ ಇಷ್ಟದ ಉಡುಪುಗಳಾಗಿ ಹೋಗಿವೆ. ಆಶ್ರಮದ ಮುಖ್ಯಸ್ಥರಾದ ಜಾನಕಮ್ಮನವರಿಗೆ ಸೌಮ್ಯಳೆಂದರೆ ಉಡುಪುಗಳನ್ನು ಮಾತ್ರ ಧರಿಸುವಳು. ಧರಿಸುತ್ತ ಧರಿಸುತ್ತ ಅವೇ ಅವಳಿಗೆ ಇಷ್ಟದ ಅಚ್ಚು ಮೆಚ್ಚು. ಮೋಸ–ಕಪಟವರಿಯದ ಒಳ್ಳೆಯ ಹುಡುಗಿ ಎಂದು. ಈಗಷ್ಟೇ ವಿದೇಶದಿಂದ ಹಿಂದಿರುಗಿ ಯಾವುದಾದರೂ ಉದ್ಯಮವನ್ನು ಆರಂಭಿಸಬೇಕೆಂದು ಉತ್ಸಾಹದಲ್ಲಿರುವ ಅವರ ಮಗ ಸುಮುಖನಿಗೆ ಈ ಸೌಮ್ಯ ಒಳ್ಳೆಯ ಜೋಡಿಯಾಗುವಳು ಎಂದು ಯೋಚಿಸುವರು. ಆದರೆ ಈ ಮಾತನ್ನು ಸೌಮ್ಯಳ ಮುಂದೆ ಎಂದೂ ಅವರು ಬಾಯ್ಬಿಟ್ಟು ಹೇಳಲು ಹೋಗಿಲ್ಲ. ಜಾನಕಮ್ಮ 'ಸೇವಾಸದನ'ದ ಹತ್ತಿರವೇ ಮನೆಯಿರುವ ಒಬ್ಬ ನಿವೃತ್ತ ಶಿಕ್ಷಕಿ, ಇತ್ತೀಚೆಗೆ ಅವರ ಗಂಡ ತೀರಿಕೊಂಡಿದ್ದಾರೆ. ಊರ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದ ಈಶ್ವರಯ್ಯನೇ ಜಾನಕಮ್ಮನ ಪತಿ ಇವರಿಬ್ಬರ ಒಬ್ಬನೇ ಮುದ್ದಿನ ಕುವರ, ಸುಮುಖ. ವಿದೇಶಕ್ಕೆ ಹೋಗಿ ಎಂ.ಬಿ.ಎ. ಕಲಿತು ಹಿಂದಿರುಗಿದ್ದಾನೆ. ಬೇರೆ ಬೇರೆ ಕಂಪನಿಗಳೆಲ್ಲೆಲ್ಲ ಕೆಲಸ ಹುಡುಕುತ್ತಿದ್ದಾನೆ. ನೋಡಲು ಸ್ಮಾರ್ಟ್ ಎನ್ನುವಂಥ ನಿಲುವು. ಚಿಗುರುಮೀಸೆ. ಕಣ್ಣುಗಳಂತೂ ದಯೆಯ ಕೊಳ, "ಈತ ಯಾವ ಉದ್ಯಮ ಮಾಡಿದರೂ ಅಲ್ಲಿ ಮಾನವೀಯತೆಗೆ ನ್ಯಾಯ ಒದಗಿಸುತ್ತಾನೆ" ಎಂದು ಅವನ ತಂದೆ ಈಶ್ವರಯ್ಯನವರು ಭವಿಷ್ಯ ನುಡಿದಿರುವ ಮಾತನ್ನು ಜಾನಕಮ್ಮ ಸೌಮ್ಯಳ ಬಳಿ ಹೇಳಿ ಮಗನನ್ನು ಹೆಮ್ಮೆಯಿಂದ ನೆನೆಯುತ್ತಿರುತ್ತಾರೆ. ಸೌಮ್ಯಳಿಗೂ ಸುಮುಖನನ್ನು ನೋಡಬೇಕೆಂಬ ವಯೋ ಸಹಜವಾದ ಕುತೂಹಲ. ಆ ದಿನ ಬರುತ್ತದೆ!

ವಿದೇಶದಿಂದ ಹಿಂದಿರುಗಿದ ಸುಮುಖ ಸ್ವಲ್ಪ ಸಮಯ ಯಾವ ಸೀರಿಯಸ್ ಕೆಲಸವನ್ನೂ ಹುಡುಕದೆ ಜಾಲಿಯಾಗಿ ಕಳೆಯೋಣವೆಂದಿದ್ದಾನೆ. ಇಂಥ ಅವನ ಜಾಲಿ ಮೂಡ್ ಪಯಣದಲ್ಲೇ ಅವನಿಗೆ ಸೌಮ್ಯಳ ಪರಿಚಯವಾಗುತ್ತದೆ. ಒಂದು ದಿನ ಸದನದ ಪ್ರಾರ್ಥನಾ ಸಮಯದಲ್ಲಿ ಜಾನಕಮ್ಮನವರು ಸುಮುಖವನ್ನು ಬರಮಾಡಿಕೊಂಡು ಅಶ್ರಮ ವಾಸಿಗಳೆಲ್ಲರನ್ನೂ ಪರಿಚಯಿಸಿರುತ್ತಾರೆ. ಆಗಲೇ ಸೌಮ್ಯಳ ಮೊದಲ ಭೇಟಿ. ಸುಮುಖನಿಗೆ ಹೊರಗೆ ತಿರುಗುವಾಗ ನಡೆದುಕೊಂಡು ಹೋಗುವುದಕ್ಕಿಂತ ಅವನ ಹೊಸ ಮಾರುತಿ ಕಾರಲ್ಲೇ ತಿರುಗಾಡುವ ಅಭ್ಯಾಸ. ಯಾರು ಸ್ವಲ್ಪ ಹತ್ತಿರದ ಸ್ನೇಹಿತರಾದರೂ ಅವರನ್ನು ಒಂದು ಲಾಂಗ್ ಡ್ರೈವ್ ಕರೆದುಕೊಂಡು ಹೋಗಿ ಮನೆ ಮುಟ್ಟಿಸುವ ಅಭ್ಯಾಸ. ಒಂದು ದಿನ ಕಾಲೇಜು ಮುಗಿಸಿ ಆಶ್ರಮದ ಕಡೆ ಹೊರಟ ಸೌಮ್ಯಳನ್ನು "ಬನ್ನಿ. ಆಶ್ರಮಕ್ಕೆ ಡ್ರಾಪ್ ಮಾಡುತ್ತೇನೆ" ಎಂದ. ಸಂಕೋಚಗೊಂಡ ಸೌಮ್ಯ. "ಇರಲಿ, ಪರವಾಗಿಲ್ಲ. ಇಲ್ಲಿಂದ ಒಂದು ಕಿಲೋಮೀಟರ್ ಇದೆ ಅಷ್ಟೆ ನಡಿಗೆ ಒಳ್ಳೆಯದು" ಎಂದರೂ "ಅದೇ ಕಡೆ ಹೋಗುತ್ತಿದ್ದೇನೆ. ಬನ್ನಿ, ಪರವಾಗಿಲ್ಲ" ಎಂದಾಗ ಅವನ ಆ ಮೃದುಧ್ವನಿಗೆ ಮನ ಸೋತು ಇನ್ನು ಇಲ್ಲವೆನ್ನಲಾಗಲಿಲ್ಲ. ಡ್ರೈವರ್ ಪಕ್ಕದ ಮುಂದಿನ ಸೀಟಲ್ಲಿ ಹತ್ತಿ ಕುಳಿತಳು. ಅವಳಿಗೆ ಕಾರಿರಲಿ, ಸೈಕಲ್ ಬಿಡುವುದು ಸಹ ಗೊತ್ತಿರಲಿಲ್ಲ. ನಡೆಯುವುದೊಂದನ್ನೇ ಅವಳು ಅವಳ ಜೀವನದಲ್ಲಿ ಚೆನ್ನಾಗಿ ಕಲಿತದ್ದು, 'ಸೀಟ್ ಬೆಲ್ಟ್ ಹಾಕ್ಕೊಳ್ಳಿ" ಎಂದಾಗ "ಬರುವುದಿಲ್ಲ" ಎಂದವಳನ್ನು ಏನೂ ಅಸಮಾಧಾನಗೊಳ್ಳದೆ ತಾನೇ ಮುಂದೆ ಬಾಗಿ ಅವಳ ಹೆಗಲ ಮೇಲೆ ಆ ಬೆಲ್ಟ್ ಏರಿಸಿ "ಈಗ ಸೇಫ್" ಎಂದು ಅವಳ ಮುಖವನ್ನು ಅಭಿಮಾನದಿಂದ ನೋಡಿದ. ಸುಮುಖ "ಹೌದು ಮುಂದೆ ರಸ್ತೆಯನ್ನು ನೋಡಿಕೊಂಡು ಸರಿಯಾಗಿ ಕಾರ್ ಓಡಿಸಿದರೆ ಇನ್ನೂ ಸೇಫ್!" ಎಂದ ಸೌಮ್ಯಳ ಮಾತಿಗೆ ಅವಾಕ್ಕಾದ ಸುಮುಖ "ಪರವಾಗಿಲ್ಲ ರೀ ಚೆನ್ನಾಗಿ ಮಾತಾಡುತ್ತೀರಿ" ಎಂದಾಗ ಅವಳಿಗೆ ಮುಖ ಕೆಂಪಾಗುವಂತೆ ತುಸು ನಾಚಿಕೆಯೇ ಆಯಿತು. ಸೀಟ್ ಬೆಲ್ಟ್ ಹಾಕುವಾಗ ಅವಳ ದೇಹಕ್ಕೆ ಅವನ ಕೈ ತಾಗಿಯೇ ಅವಳಿಗೆ ರೋಮಾಂಚನವಾಗಿತ್ತು. ಗಂಡಸಿನ ಮೊದ ಮೊದಲ ಹಿತವಾದ ಸ್ಪರ್ಶ ಜೊತೆಗೆ ಸುಮುಖನ ಬಗ್ಗೆ ಅವರ ತಾಯಿ ಜಾನಕಮ್ಮನವರಿಂದ ಕೇಳಿದ ಒಳ್ಳೆಯ ಮಾತುಗಳು ಕೂಡ ಅವಳ ಆ ಮನೋ ಕಂಪನದಲ್ಲಿ ಕೆಲಸ ಮಾಡಿದ್ದವು. ಆಶ್ರಮ ಬಂದಾಗ "ಇಲ್ಲೇ ಇಳಿಯುವಿರೋ ಅಥವಾ ಒಂದು ಲಾಂಗ್ ಡ್ರೈವ್ ಹೋಗಿ ನಂತರ ಬರೋಣವೇ" ಎಂದ ಸುಮುಖನಿಗೆ ತಬ್ಬಿಬ್ಬುಗೊಂಡ ಸೌಮ್ಯ

"ಎಲ್ಲಿಗೆ?! ಮತ್ತು ಯಾಕೆ ಸುಮ್ಮನೆ ಹಾಗೆಲ್ಲಾ?!"

ಅಯ್ಯೋ ಇನ್ನೂ ಯಾವ ಜಾಯಮಾನದಲ್ಲಿದ್ದೀರಿ ನೀವು ಹಳೆಯ ಕಾಲದವರಂತೆ"

"ಇಲ್ಲ, ಇಲ್ಲೇ ಇಳೀತೀನಿ ದಯವಿಟ್ಟು ಇಳಿಸಿ"

(ಮುಂದುವರೆಯುವುದು....)

ಶ್ರದ್ಧಾಂಜಲಿ

ಶ್ರೀ ಗೋವಿಂದ ನವಿಲೇಕರ್

ಶ್ರೀ ಗೋವಿಂದ ನವಿಲೇಕರ್‌ರವರು ಅಲ್ಪಕಾಲದ ಅನಾರೋಗ್ಯದಿಂದ ಕೊಪ್ಪದ ಅವರ ಮನೆಯಲ್ಲಿ 15ನೇ ಡಿಸೆಂಬರಿನಂದು ನಿಧನಹೊಂದಿದ್ದಾರೆ. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಅವರು ಕೆಲ ವರ್ಷಗಳ ಕೆಳಗೆ ಮುಂಬಯಿಯಲ್ಲಿ ಮಗನ ಮನೆಯಲ್ಲಿದ್ದಾಗ ಅಸೋಸಿಯೇಷನ್ನಿನ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಅವರು ಮಲೆನಾಡಿನ ಜನಜೀವನದ ಬಗ್ಗೆ ಬರೆದ ದೀರ್ಘ ಲೇಖನವು ನೇಸರು ಪತ್ರಿಕೆಯಲ್ಲಿ ಪ್ರಕಟವಾಗಿ ಅನೇಕರ ಗಮನ ಸೆಳೆದಿತ್ತು.

ಅನುವಾದ :

ಸಾಹಿತ್ಯದ ಅನುಸೃಷ್ಟಿ

✍ **ಶ್ಯಾಮಲಾ ಮಾಧವ**

ಚೆಂಬೂರ್ ಕರ್ನಾಟಕ ಸಂಘ ಹೈಸ್ಕೂಲಿನ ಸಾಹಿತ್ಯ ಸಹವಾಸ ಕಾರ್ಯಕ್ರಮದಲ್ಲಿ ಪ್ರಸ್ತುತ ಪಡಿಸಿದ ಸುಬ್ಬಯ್ಯ ಶೆಟ್ಟಿ ದತ್ತಿನಿಧಿ ಉಪನ್ಯಾಸ.. ಬಹುಭಾಷಾ ಭಾರತಿ ಎಂದೇ ಕರೆಯಲ್ಪಡುವ ನಮ್ಮ ದೇಶದ ಈ ಮುಂಬೈ ಮರಾಠಿ ನೆಲದಲ್ಲಿ ನಾವು ಕನ್ನಡಿಗರು ಇಂದಿಲ್ಲಿ ಸಾಹಿತ್ಯ ಸಹವಾಸವೆಂದು ಒಗ್ಗೂಡಿದ್ದೇವೆ. ವಿಶ್ವಭಾರತಿಗೆ ಕನ್ನಡದಾರತಿ ಎಂದು ಬರೆದು ಹಾಡಿದರು, ನಮ್ಮ ರಾಷ್ಟ್ರಕವಿ ಕುವೆಂಪು ಅವರು. ವಿಶ್ವದಾದ್ಯಂತದ ಅನ್ಯ ಭಾಷೆಗಳಲ್ಲಿರುವ ಮೌಲಿಕ ಕೃತಿಗಳ ಅನುಸೃಷ್ಟಿ ಕನ್ನಡ ಸಾಹಿತ್ಯ ಭಂಡಾರದ ಸಿರಿಯನ್ನು ವೃದ್ಧಿಸುವಂತಹುದು. ಈ ಯೋಜನೆಯಲ್ಲಿ ತೊಡಗಿರುವ ನಮ್ಮ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಘೋಷವಾಕ್ಯವೂ ಕೂಡಾ. ವಿಶ್ವಭಾರತಿಗೆ ಕನ್ನಡದಾರತಿ ಎಂಬುದೇ ಆಗಿದೆ.

ಸಾಹಿತ್ಯವೆಂದರೆ ಹಿತವನ್ನುಂಟು ಮಾಡುವುದು, ಸಮಷ್ಟಿಯ ಹಿತವನ್ನು ಸಾಧಿಸುವುದೇ ಸಾಹಿತ್ಯ. ಪುಸ್ತಕಗಳ ನಂಟು ಹಾಗೂ ಸಾಹಿತ್ಯ ಸಹವಾಸಕ್ಕಿಂತ ಮಿಗಿಲಾದ ನಿಧಿ ಬೇರೆ ಇಲ್ಲ. ಬುಕ್ಸ್ ಆರ್ ಅವರ್ ಬೆಸ್ಟ್ ಫ್ರೆಂಡ್ಸ್ ಎಂದೇ ಬಾಲ್ಯದಿಂದಲೂ ನಂಬಿ ಬೆಳೆದವಳು, ನಾನು. ಇಂದು ನಾನೋರ್ವ ಲೇಖಕಿಯಾಗಿ ಗುರುತಿಸಿಕೊಂಡಿದ್ದರೆ ಅದಕ್ಕೆ ಕಾರಣ, ಬಾಲ್ಯದಲ್ಲಿ ನನಗೊದಗಿದ ಪುಸ್ತಕ ಸಂಪತ್ತು. ಮನೆಯಲ್ಲೇ ಕೈಗೆಟುಕಿದ ನಮ್ಮ ತಂದೆಯವರ ಪುಸ್ತಕ ಭಂಡಾರದಿಂದ, ಶಾಲೆಯೇ ಮನೆಯಾಗಿದ್ದ ನಮ್ಮ ಮಂಗಳೂರ ಬೆಸೆಂಟ್ ಶಾಲಾ ಲೈಬ್ರೆರಿಯಿಂದ ಮನೆಯೆದುರಿನ ಕಾರ್ನಾಡ್ ಸದಾಶಿವರಾವ್ ಲೈಬ್ರೆರಿ ಹಾಗೂ ಲೈಟ್ ಹೌಸ್ ಹಿಲ್ ಲೈಬ್ರೆರಿಯಿಂದ ಪುಸ್ತಕಗಳನ್ನು ನನ್ನದಾಗಿಸಿಕೊಂಡು, ಓದಿ ಮೆಚ್ಚಿದುದನ್ನು ಹೃದಯದಲ್ಲಿ ಸ್ಥಾಯಿಯಾಗಿಸಿಕೊಂಡು ಬೆಳೆದವಳು ನಾನು. ಲೈಬ್ರರಿ ಪೀರಿಯಡ್ ಆಗ ಶಾಲಾ ಮಕ್ಕಳಿಗೆ ವರದಾನವಾಗಿತ್ತು. ಇಂದಿನ ಶಾಲೆಗಳಲ್ಲೂ ಲೈಬ್ರೆರಿ ಪೀರಿಯಡ್ ಇರಬೇಕು, ಓದುವ ಹವ್ಯಾಸ, ಪುಸ್ತಕ ಪ್ರೀತಿ ಮಕ್ಕಳಲ್ಲಿ ಬೆಳೆಯಬೇಕು ಎಂಬ ಮಾತನ್ನು ನಾನು ಹೇಳುತ್ತಾ ಬಂದಿದ್ದೇನೆ. ಸಾಹಿತ್ಯ ಸಹವಾಸವನ್ನು ಆಯೋಜಿಸುವ ಈ ವಿದ್ಯಾಮಂದಿರದಲ್ಲಿ ಸಾಹಿತ್ಯದ ಸವಿ ವಿದ್ಯಾರ್ಥಿಗಳ ಪಾಲಿಗೆ ಲಭ್ಯವಿದೆಯೆಂದು ಭಾವಿಸಿದ್ದೇನೆ.

2025 ಕನ್ನಡ, ಕನ್ನಡಿಗರೆಲ್ಲರ ಪಾಲಿಗೆ ಹೆಮ್ಮೆ, ಅಭಿಮಾನದ ವರ್ಷ! ಕನ್ನಡ ಕೃತಿಯೊಂದರ ಇಂಗ್ಲಿಷ್ ಅನುವಾದ ಪ್ರತಿಷ್ಠಿತ ಬುಕರ್ ಪ್ರಶಸ್ತಿಗೆ ಪಾತ್ರವಾಗಿದೆ. ನಮ್ಮೆಲ್ಲರ ಹೆಮ್ಮೆಯ ಬಾನು ಮುಷ್ತಾಕ್ ಅವರ 'ಎದೆಯಹಣತೆ' ಕಥಾ ಸಂಕಲನ, ನಮ್ಮವರೇ ಆದ ದೀಪಾ ಭಸ್ತಿ ಅವರಿಂದ ಇಂಗ್ಲಿಷ್‌ಗೆ ಅನುವಾದಿಸಲ್ಪಟ್ಟುದು ಹಾರ್ಟ್ ಲ್ಯಾಂಪ್ ಎಂಬ ಶೀರ್ಷಿಕೆಯಲ್ಲಿ ಬುಕರ್ ಪ್ರಶಸ್ತಿಗೆ ಪಾತ್ರವಾಗಿ ಜಗತ್ತಿನಾದಾದ್ಯಂತ ವಿದ್ವತ್ ವಲಯದಲ್ಲಿ ಗುರುತಿಸಲ್ಪಟ್ಟಿದೆ. ಬಾನು ಮುಷ್ತಾಕ್ ಅವರ ಎದೆಯ ಹಣತೆಯ ಗೆಲುವು, ಮಾನವೀಯ ಅಂತಃಕರಣಕ್ಕೂ, ನಾಗರಿಕ ವಿವೇಕಕ್ಕೂ ಸಂದ ಗೆಲುವು ಎಂದು ಖ್ಯಾತ ವಿಮರ್ಶಕಿ ಡಾ. ಎಂ. ಎಸ್. ಆಶಾದೇವಿ ನುಡಿದಿದ್ದಾರೆ.

ಎರಡುಸಾವಿರದ ಹದಿನೆಂಟರಲ್ಲಿ ನಮ್ಮವರೇ ಆದ ಜಯಂತ್ ಕಾಯ್ಕಿಣಿ ಅವರ 'ನೋ ಪ್ರೆಸೆಂಟ್ಸ್ ಪ್ಲೀಸ್'ಕಥಾ ಸಂಕಲನ, ತೇಜಸ್ವಿ ನಿರಂಜನರ ಅನುವಾದದೊಂದಿಗೆ ಇಂಟರ್‌ನ್ಯಾಶನಲ್ ಸೌತ್ ಏಷ್ಯನ್ ಲಿಟರರಿ ಅವಾರ್ಡ್‌ನಿಂದ ಸಮ್ಮಾನಿತವಾಗಿತ್ತು.

ಕಾರಂತ, ನಿರಂಜನ, ಅನಕೃ, ತರಾಸು, ಬಲ್ಲಾಳರಂತಹ ಉದ್ದಾಮ ಸಾಹಿತಿಗಳ ಕನ್ನಡ ಕೃತಿಗಳೊಡನೆ ನನ್ನ ಬಾಲ್ಯವನ್ನು ಬೆಳಗಿದ್ದು, ಕನ್ನಡದಲ್ಲಿ ಪಡಿಮೂಡಿದ ಅನ್ಯಭಾಷಾ ಸಾಹಿತ್ಯವೂ ಕೂಡಾ. ಬಾಲ್ಯದಲ್ಲಿ ಕೇಳಿ, ಓದಿ ಸಂಭ್ರಮಿಸಿದ ಸಿಂಡ್ರೆಲಾ, ನಾವಿಕ ಸಿಂದಬಾದ್, ಅರೇಬಿಯನ್ ನೈಟ್ಸ್, ಗಲಿವರ್ಸ್ ಟ್ರಾವೆಲ್ಸ್‌ನಂತಹ ಬಾಲ ಸಾಹಿತ್ಯ:. ಬೆಳೆದಂತೆ ನಿರಂಜನರ ಅನುವಾದದ ಮ್ಯಾಕ್ಸಿಂ ಗಾರ್ಕಿಯ ತಾಯಿ, ಸಾನೆ ಗುರೂಜಿಯ ಶ್ಯಾಮನ ತಾಯಿ, ಠಾಗೋರರ ಮತ್ತು ಶರಶ್ಚಂದ್ರರ ಕಾದಂಬರಿಗಳಂತೆಯೇ, ಕೆ.ಎಮ್. ಮುನ್ಶಿ ಅವರ ಕೃಷ್ಣಾವತಾರ, ಕೃಷ್ಣಾ ಹಠೀ ಸಿಂಗ್ ಅವರ 'ವಿತ್‌ನೋರಿಗ್ರೆಟ್ಸ್‌ನ'ಅನುವಾದ 'ನೆನಪುಕಹಿಯಲ್ಲ' ನನಗೆ ಬಲು ಪ್ರಿಯವಾಗಿದ್ದುವು. ಜೊತೆಗೆ ಹ್ಯಾರಿಯೆಟ್ ಬೀಚರ್ ಸ್ಟೋ ರಚಿಸಿದ 'ಅಂಕ್ಲ್ ಟಾಮ್ಸ್‌ಕ್ಯಾಬಿನ್', ಚಾರ್ಲ್ಸ್ ಡಿಕ್ಕನ್ಸ್‌ನ 'ಡೇವಿಡ್‌ಕಾಪರ್‌ಫೀಲ್ಡ್', ಪರ್ಲ್ ಬಕ್ ಅವರ 'ದಗುಡ್‌ಅರ್ಥ್'ನಂತಹ ಆಂಗ್ಲ ಭಾಷಾ ಕೃತಿಗಳೂ ನನ್ನನ್ನು ಆಕರ್ಷಿಸಿದ್ದುವು.

ರಫಿಯಾ ಮಂಜೂರುಲ್ ಅಮೀನ್ ಅವರ ಉರ್ದೂ ಮೂಲದ ಕೃತಿ ಆಲಂಪನಾವನ್ನು ಹಿಂದಿಗೆ ತಂದವರು, ಪತಿ ಮಂಜೂರುಲ್ ಅಮೀನ್ ಅವರು. ಆ ಹಿಂದೀ ಅನುವಾದದ ಭಾಷೆ ಹಾಗೂ ಸಾಹಿತ್ಯದ ಸೊಗಸಿಗೆ ಮಾರುಹೋಗಿ ಅದನ್ನು ಕನ್ನಡಕ್ಕಿಳಿಸಿದ ನನ್ನ ಪ್ರಥಮ ಪ್ರಕಟಿತ ಕೃತಿಯೇ 'ಆಲಂಪನಾ'. ಬಳಿಕ ಮೆಚ್ಚಿ ಕೈಗೊಂಡ ಉದ್ದಾಮ ಹಿಂದೀ ಸಾಹಿತಿ ಶಿವಾನಿ ಅವರ ಹಿಂದೀ ಕಥೆಗಳ ಅನುವಾದ, ರಡ್ಯಾರ್ಡ್ ಕಿಪ್ಲಿಂಗ್ ಹಾಗೂ ಮಾರ್ಕ್ವೆಜ್‌ನ ಇಂಗ್ಲಿಷ್ ಕಥೆಗಳ ಅನುವಾದ ಪತ್ರಿಕೆಗಳಲ್ಲಿ ಪ್ರಕಟವಾದವು. ಮತ್ತೆ ನಾನು ಆಯ್ದುಕೊಂಡುದೆಲ್ಲ ಇಂಗ್ಲಿಷ್ ವಿಶ್ವಸಾಹಿತ್ಯ ಕೃತಿಗಳು. ಓದಿ ಮೆಚ್ಚಿ ನನ್ನಂತರ್ಯದಲ್ಲಿ ಸ್ಥಾಯಿಯಾಗಿಸಿಕೊಂಡಿದ್ದ ವಿಶ್ವವಿಖ್ಯಾತ ಕೃತಿಗಳವು. ಆ ಕೃತಿಗಳ ಬಗೆಗಿನ ಪ್ರೀತಿ, ಹಾಗೂ ನಾನು ಮೆಚ್ಚಿದ ಆ ಕೃತಿಗಳು ನನ್ನ ಕನ್ನಡ ಓದುಗರಿಗೂ ಓದಲು ಸಿಗುವಂತಾಗಲಿ, ಕನ್ನಡ ಸಾಹಿತ್ಯಸಿರಿ ವೃದ್ಧಿಸಲಿ ಎಂಬ ಆಶಯವೇ ನನ್ನೀ ಅನುವಾದದ ಹಿಂದಿನ ಪ್ರೇರಣೆ.

ಡಾ. ಸಿ.ಕೆ. ವೆಂಕಟರಾಮಯ್ಯನವರ ಕಾಳಿದಾಸ ಮಹಾಕವಿ ಉದ್ಗ್ರಂಥವನ್ನು ನನ್ನ ಕಾಲೇಜ್ ದಿನಗಳಲ್ಲಿ ಓದುವಂತೆ ಸೂಚಿಸಿದವರು ನನ್ನ ವಾತ್ಸಲ್ಯಗುರು

ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಸಂಸ್ಕೃತದಿಂದ ಕನ್ನಡಾವತರಣವಾದ ಈ ಕೃತಿರತ್ನದ ಉತ್ಕೃಷ್ಟ ಭಾಷಾ ಸೊಗಸೇ ನನ್ನ ಭಾಷೆಗೂ ಇನಿತಾದರೂ ಮಾಧುರ್ಯವನ್ನಿತ್ತಿರಬಹುದು. ಆ ಪದಗುಂಫನ, ಶಬ್ದ ಮಾಧುರ್ಯ, ಪದಲಾಲಿತ್ಯ – ಭಾಷಾ ಭಂಡಾರದ ಅನುಪಮ ಸಿರಿಯದು!.

ಕಾಳಿದಾಸನ 'ಋತುಸಂಹಾರ'ದ ಸಿರಿಯನ್ನು ಮತ್ತೆ ಸ್ಮರಿಸುವಂತಾದುದು, ಮರಾಠಿ ಭಾಷೆಯ ಶ್ರೇಷ್ಠ ಸಾಹಿತಿ ದುರ್ಗಾ ಭಾಗವತ್ ಅವರ 'ಋತುಚಕ್ರ'ದ ಕನ್ನಡ ಅನುವಾದವನ್ನೋದಿದಾಗ. ಮುಂಬೈಯವರೇ ಆದ ಅನುವಾದಕ ಗಣಪತಿ ಪೈ ಅವರನ್ನು ಬಲ್ಲವರಾರೂ ನನಗೆ ಈ ಮುಂಬೈಯಲ್ಲಿ ಸಿಗಲಿಲ್ಲ. ಅಂತಹ ಉತ್ತಮ ಅನುವಾದಕ ಹೀಗೆ ಅಜ್ಞಾತರಾಗಿ ಹೋದ ವಿಷಾದ ನನ್ನದು. 'ಋತುಚಕ್ರ'ಕೈ ಸೇರಿದಾಗ ಮೂಲಕೃತಿಯನ್ನು ರಚಿಸಿದ ಉತ್ಕೃಷ್ಟ ಸಾಹಿತಿ ದುರ್ಗಾ ಭಾಗವತ್ ಅವರೂ ಇಲ್ಲವಾಗಿದ್ದರು.

ಲಾರಾ ಇಂಗಲ್ಸ್ ವೈಲ್ಡರ್ ಬರೆದ 'ಅಲಿಟ್‌ಲ್ ಹೌಸ್ ಇನ್‌ದ ಬಿಗ್‌ವುಡ್ಸ್' ಸರಣಿಯನ್ನು 'ದೊಡ್ಡಕಾಡಿನಲ್ಲಿ ಪುಟ್ಟಮನೆ' ಎಂಬ ಶೀರ್ಷಿಕೆಯಲ್ಲಿ ಅಚ್ಚುಕಟ್ಟಾಗಿ ಕನ್ನಡಕ್ಕೆ ತಂದವರು, ಬೆಂಗಳೂರಿನ ಎಸ್. ಅನಂತನಾರಾಯಣ ಅವರು. ಪ್ರತಿ ಮನೆಯಲ್ಲೂ, ಗ್ರಂಥಾಲಯದಲ್ಲೂ ಇರಲೇ ಬೇಕಾದ ಒಂಬತ್ತು ಭಾಗಗಳ ಕೃತಿಯಿದು. ಅಮೆರಿಕಾದ ಕಾಡಿನಿಂದ ನಾಡಿನತ್ತ ವಲಸೆ ಬಂದು, ಎಲ್ಲ ಪ್ರತಿಕೂಲ ಪ್ರಕೃತಿ ವೈಪರೀತ್ಯದಲ್ಲೂ ಮತ್ತೆ ಮತ್ತೆ ಕೃಷಿ, ವಿದ್ಯೆ, ಉದ್ಯಮವನ್ನರಸಿ ನೆಲೆಯಾದ ಚಿಕ್ಕ ಕುಟುಂಬದ ಪುಟ್ಟ ಬಾಲೆ ಲಾರಾಳ ಕಥೆಯದು!

'ಗಾನ್ ವಿತ್‌ದ ವಿಂಡ್'ನಂತಹ ನನ್ನ ಆಂಗ್ಲ ಭಾಷಾ ಮೂಲದ ಕೃತಿಗಳ ಬಗ್ಗೆ, ಪರಕೀಯ ಜನಾಂಗ, ಪರ ಪ್ರದೇಶದ ಕಥನ ಕನ್ನಡದ ಓದಿಗೆ ಹೇಗೆ ಹೊಂದುವುದೆಂದು ಕೇಳಿದವರಿದ್ದರು. ಪರ ಪ್ರದೇಶವಿರಲಿ, ಸ್ವದೇಶವಿರಲಿ, ಜನರ ಸ್ವಭಾವ ಎಲ್ಲೆಡೆ ಒಂದೇ ಆಗಿರುತ್ತದೆ. ನಮ್ಮಂತೇ ಪ್ರೀತಿ, ದ್ವೇಷ, ಕರುಣೆ, ಕ್ರೋಧ, ಮದ, ಮತ್ಸರವಿರುವ ಜನರು. ವಿಭಿನ್ನ ಪ್ರದೇಶದ ವಿಭಿನ್ನ ಜನರು, ಅವರ ಸಂಸ್ಕೃತಿ, ಅಲ್ಲಿನ ಪ್ರಕೃತಿ, ಪರಿಸರ, ಜನರ ನಡೆನುಡಿ, ಆಗುಹೋಗುಗಳು, ಪ್ರೀತಿ, ಪ್ರೇಮ, ವಿರಹ, ಮಿಲನ, ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು, ಯುದ್ಧ, ಪತನ, ಪುನರುಜ್ಜೀವನ – ನಮ್ಮ ಅರಿವನ್ನು ವಿಕಸಿಸುವಂತಹ ಜ್ಞಾನದಾಗರ ಪರಭಾಷಾ ಪುಸ್ತಕಗಳು!.

ಕೃತಿಯೊಂದರ ಅನುಸೃಷ್ಟಿ– ಅದೊಂದು ಕಲೆ. ಅನುವಾದದ ಭಾಷೆ ಅದೊಂದು ಅನುವಾದವೇ ಅಲ್ಲವೇನೋ, ಸಂಪೂರ್ಣ ಕನ್ನಡದ್ದೇ ಕೃತಿಯೇನೋ ಎಂಬಂತಿರುವುದೇ ಈ ಅನುಸೃಷ್ಟಿಯ ಸಾಫಲ್ಯದ ಗುರುತು. ಅನುವಾದವು ಯಾವಾಗಲೂ ಮೂಲಕೃತಿಗೆ ನಿಷ್ಠವಾಗಿದ್ದು, ಅದರ ಸಾರಸರ್ವಸ್ವಕ್ಕೆ, ಸೌಂದರ್ಯಕ್ಕೆ, ಶ್ರೇಷ್ಠತೆಗೆ ಕುಂದು ಬರದಂತಿರಬೇಕು. ಮೂಲಕ್ಕೆ ಸಂಪೂರ್ಣ ನ್ಯಾಯವನ್ನು ಒದಗಿಸಿರಬೇಕು.

ಗಾನ್ ವಿತ್ ದ ವಿಂಡ್‌ನ ಕಥಾನಾಯಕಿ ಸ್ಕಾರ್ಲೆಟ್, ಇಚ್ಛೆ ಹಾಗೂ ಪ್ರಾಪ್ತಿ ಎರಡು ಭಿನ್ನ ವಿಷಯಗಳೆಂಬುದನ್ನೇ ಅರಿಯದ, ಬಯಸಿದ್ದನ್ನು ಪಡೆದೇ ತೀರುವ ಛಲದ ಹದಿಹರೆಯದ, ಮನಸ್ವಿನಿ ಚೆಲುವೆ. ಸತ್ಯ, ನ್ಯಾಯ, ಪ್ರೀತಿ, ಕರುಣೆ, ಸೇವಾನಿಷ್ಠೆಯ ತಾಯಿ ಎಲೆನ್‌ಳಲ್ಲಿ ಮಾತೆ ಮೇರಿಯನ್ನು ಕಂಡರೂ, ಅವಳಂತಾಗ ಬಯಸಿದರೂ, ಹಾಗಿರುವುದರಿಂದ ಜೀವನದಲ್ಲಿ ಎಲ್ಲ ಮೋಜನ್ನೂ ಕಳಕೊಳ್ಳ ಬೇಕಾಗುವುದೆಂದು, ಮುಂದೆಂದಾದರೂ ಪ್ರಾಯ ಸಂದಾಗ ತಾಯಿಯಂತೆ ಒಳ್ಳೆಯವಳಾಗುವೆನೆಂದು ಅಂದುಕೊಳ್ಳುವವಳು. ಹಿಡಿಮಣ್ಣನ್ನೆತ್ತಿ ಹಿಡಿದು ಮತ್ತೆಂದೂ ಹಸಿದಿರಲಾರೆನೆಂದು ಶಪಥ ಗೈದವಳು. ಸೋಲು ಕಣ್ಣಲ್ಲೇ ಕಣ್ಣಿಟ್ಟು ದಿಟ್ಟಿಸಿದರೂ ಸೋಲದ ತನ್ನ ಜನರ ಛಲದಿಂದ, ಮತ್ತೆ ತಲೆಯೆತ್ತಿ ನಿಂತವಳು. ಇತ್ತ ಜೇನ್ ಏರ್‌ನ ಕಥಾನಾಯಕಿ ಜೇನ್, ಬುದ್ಧಿ – ಭಾವಗಳ ಸಂಘರ್ಷದಲ್ಲಿ ಬುದ್ಧಿಯೇ ಮೇಲ್ಮೈ ಆಗುವ, ಅಸೀಮ ಆತ್ಮಬಲದ, ಪ್ರೀತಿ, ಬಾಂಧವ್ಯಕ್ಕಾಗಿ ತುಡಿದರೂ, ಹೃದಯದ ಕರೆಗೆ ಓಗೊಡದೆ .ಕಾದಿದ್ದ ಪ್ರೇಮಲೋಕವನ್ನು ತೊರೆದು, ತಾನು ಅತಿಯಾಗಿ ಪ್ರೀತಿಸುವ ಜೀವಕ್ಕೆ ಕೇಡುಕಿನ ಸಾಧನವಾಗುವ ಭಯದಿಂದ ತಾನೇ ದೂರವಾದವಳು. ಈ ವಿಭಿನ್ನ ವ್ಯಕ್ತಿತ್ವದ ಕಥಾನಾಯಕಿಯರಿಬ್ಬರನ್ನೂ ನಾನು ನನ್ನವರಾಗಿಸಿಕೊಂಡು ಹೃದಯದಲ್ಲಿ ಕಾಪಿಡಲು ಕಾರಣ, ಲೇಖಕಿಯರಾದ ಮಾರ್ಗರೆಟ್ ಮಿಶೆಲ್ ಹಾಗೂ ಶಾಲೆಟ್ ಬ್ರಾಂಟೆ ಚಿತ್ರಿಸಿದ ಅತ್ಯಂತ ಪ್ರಭಾವಪೂರ್ಣ ಪಾತ್ರಚಿತ್ರಣ; ಹೆಣೆದ ಅಮೋಘ, ಚಿತ್ತಾಕರ್ಷಕ ಸಂಭಾಷಣೆ. ಸಾರ್ವಕಾಲಿಕವಾಗುಳಿವ ಅನನ್ಯ ಕಥಾನಕ! ಮೇರಿ ಶೆಲ್ಲಿ ಹಾಗೂ ಎಮಿಲಿ ಬ್ರಾಂಟೆಯರ 'ಫ್ರಾಂಕೆನ್ ಸ್ಟೈನ್' ಹಾಗೂ 'ವದರಿಂಗ್ ಹೈಟ್ಸ್'ನಂತಹ ಗಾಥಿಕ್ ಶೈಲಿಯ ಕೃತಿಗಳ ನನ್ನ ಅನುವಾದಕ್ಕೂ ಇದೇ ಮಾತು ಅನ್ವಯಿಸುತ್ತದೆ.

ಅನುವಾದ ಅಕಾಡೆಮಿ ನನಗೊಪ್ಪಿಸಿದ 'ದ ಸ್ಟೋರಿ ಆಫ್ ಸಿವಿಲಿಸೇಶನ್' ಹಾಗೂ 'ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು' ಗ್ರಂಥಗಳ ಭಾಗಶಃ ಅನುವಾದ ಕಾರ್ಯವೂ ನನ್ನನ್ನು ಬೆಳೆಸಿದೆ. ಅಂತೆಯೇ 'ಅಸಾಮಾನ್ಯ ಶ್ರೀಸಾಮಾನ್ಯ ಎಂ. ಆರ್. ಪೈ' ಆಗಲೀ, ಮಂಜೇಶ್ವರದ ಪುಟ್ಟ ಬಾಲೆ ಅಮ್ಮಣುವಿನ ಕಣ್ಣುಗಳು ಕಂಡ ಅಂದಿನ ಮಂಗಳೂರು, ಮಂಜೇಶ್ವರದ ಸಾರಸ್ವತ ಕೂಡುಕುಟುಂಬದ ಚಿತ್ರಣವುಳ್ಳ, 'ಬಾಲ್ಯಕಾಲ ಮಾಯಾಜಾಲ'ವಾಗಲೀ ನನ್ನ ಓದು, ಬರಹದ ಹಸಿವನ್ನು ಹೆಚ್ಚಿಸುತ್ತಲೇ ಬಂದಿವೆ.

ಕೆಲ ಸಣ್ಣ ಕಥೆಗಳನ್ನು ಹಾಗೂ ಅಮೆರಿಕನ್ನಡದ ನಾಗಲಕ್ಷ್ಮೀ ಹರಿಹರೇಶ್ವರ ಅವರ ಆತ್ಮಕಥನ 'ಯಾತ್ರಿ'ಯನ್ನೂ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ ಸಂತಸವೂ ನನ್ನದು.

ಕುವೆಂಪು ಅವರ ಮಹತ್ಕೃತಿ 'ಮಲೆಗಳಲ್ಲಿ ಮದುಮಗಳು', ವನಮಾಲಾ ವಿಶ್ವನಾಥ್ ಅವರಿಂದ ಇಂಗ್ಲಿಷ್‌ಗೆ ಅನುವಾದಿಸಲ್ಪಟ್ಟು 'ಬ್ರೈಡ್ ಇನ್ ದ ಹಿಲ್ಸ್' ಎಂಬ ಶೀರ್ಷಿಕೆಯಲ್ಲಿ ಪೆಂಗ್ವಿನ್ ಬುಕ್ಸ್‌ನಿಂದ ಪ್ರಕಟಿಸಲ್ಪಟ್ಟಿದೆ.

ಕಾಳಿದಾಸ ಮಹಾಕವಿಯ 'ಶಾಕುಂತಲ' ನಾಟಕವು 1870ರಲ್ಲಿ ಚುರುಮುರಿ ಶೇಷಗಿರಿರಾಯರಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟು, ಮುಂಬಯಿ

ಎಜುಕೇಶನಲ್ ಸೊಸೈಟಿಯಿಂದ ಪ್ರಕಟಿಸಲ್ಪಟ್ಟು, ಶಾಕುಂತಲದ ಪ್ರಥಮ ಕನ್ನಡಾನುವಾದವೆಂದು ಗಣಿಸಲ್ಪಟ್ಟಿತು. ತದನಂತರ ಬಂದುದೇ ಮೈಸೂರು ಆಸ್ಥಾನ ಕವಿ ಬಸವಪ್ಪ ಶಾಸ್ತ್ರಿಗಳ ಅನುಪಮ ಅನುವಾದ, 'ಅಭಿಜ್ಞಾನ ಶಾಕುಂತಲ'.

ಮುಂಬೈಯ ನಮ್ಮ ಕನ್ನಡದ ಮುಂದಾಳು ವಿದ್ವಾನ್ ರಾಮಚಂದ್ರ ಉಚ್ಚಿಲರು ಎಮ್.ವಿ. ಕಾಮತ್ ಅವರ 'ಪುನರಪಿಜನನಂ 'ಕಾದಂಬರಿಯನ್ನು ಸೊಗಸಾಗಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದರು. ನಮ್ಮ ಸೃಜನಾ ಬಳಗದ ಅಕ್ಷತಾ ದೇಶಪಾಂಡೆ ಹಾಗೂ ಜಿ. ಪಿ. ಕುಸುಮ ಅವರು ಮರಾಠಿಯಿಂದ ಕನ್ನಡಕ್ಕೆ ಮಹತ್ವದ ಕೃತಿಗಳನ್ನು ಅನುವಾದಿಸಿದ್ದಾರೆ. ಶಿಮುಂಜೆ ಪೆರಾರಿ ಅವರು ಗುಜರಾಥಿಯಿಂದ, ರತ್ನಾಕರ ಶೆಟ್ಟಿ ಹಾಗೂ ಮಮತಾ ರಾವ್ ಅವರು ಮರಾಠಿಯಂದ ಕನ್ನಡಾನುವಾದ ಕೈಗೊಂಡಿದ್ದಾರೆ. ಅಲಮೇಲು ಅಯ್ಯರ್ ಅವರು ಹಿಂದಿಯಿಂದ ಕನ್ನಡಕ್ಕೆ ಅನುವಅದ ಕೃಷಿ ಕೈಗೊಂಡವರು. ತೀರ ಇತ್ತೀಚೆಗೆ ನಮ್ಮ ಕಥನ ಶಿಲ್ಪಿ ಮಿತ್ರಾ ವೆಂಕಟ್ರಾಜ್ ಅಮಿತಾವ್ ಘೋಷ್ ಅವರ 'ಇನ್ ಅನ್ ಆಂಟಿಕ್‌ಲ್ಯಾಂಡ್' ಕೃತಿಯನ್ನು 'ಒಂದು ಪುರಾತನನೆಲದಲ್ಲಿ' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ಕುಂದಾಪುರದ ಪಾರ್ವತಿ ಐತಾಳ್, 'ದ ಗುಡ್ ಅರ್ಥ್' ಕೃತಿಯನ್ನು ಇಂಗ್ಲಿಷ್‌ನಿಂದ ಅನುವಾದಿಸಿದಂತೇ, ಮಲೆಯಾಳದ ಅನೇಕ ಉತ್ತಮ ಕೃತಿಗಳನ್ನು ಕನ್ನಡದಲ್ಲಿ ಮರುಸೃಷ್ಟಿಸುವಲ್ಲಿ, ಸಫಲರಾಗಿದ್ದಾರೆ. ಬೆಂಗಳೂರಿನ ಎಂ.ಆರ್.ಕಮಲಾ ಅವರು, ದೆಹಲಿಯ ಪ್ರಸಾದ್ ನಾಯಕ್ ಅವರು ಆಫ್ರಿಕನ್ ಲೇಖಕರ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಎನ್. ಎಮ್. ಭಟ್, ಮೈತ್ರೇಯಿ ಕರ್ಣೂರ್, ಓ. ಎಲ್. ನಾಗಭೂಷಣ ಸ್ವಾಮಿ, ಎಲ್.ಸಿ. ಸುಮಿತ್ರಾ, ನಲ್ಲ ತಂಬಿ, ಸಂಧ್ಯಾರಾಣಿ, ರೇಣುಕಾ ನಿಡಗುಂದಿ, ರಾಹು, ರಾಜಾರಾಮ್ ತಲ್ಲೂರು, ರಾಜಣ್ಣ ತಗ್ಗಿ, ಡಾ. ವಿಜಯಾ ಸುಬ್ಬರಾಜ್, ಕೆ. ಗಂಗಾಧರಯ್ಯ, ಜಯಪ್ರಕಾಶ್ ನಾರಾಯಣ್, ದಾದಾಪೀರ್ ಜೈಮನ್ ಹೀಗೆ ಉತ್ತಮ ಅನುವಾದಕರ ಹೆಸರುಗಳ ಪಟ್ಟಿ ಇನ್ನೂ ಸಾಕಷ್ಟು ದೊಡ್ಡದಿದೆ. ತಾಯಿ ಸರಸ್ವತಿಯ ಉದ್ಯಾನದಲ್ಲಿ ಕೃತಿಗಳ ಆದಾನ, ಪ್ರದಾನ ಭರದಿಂದ ನಡೆದಿದೆ.

ಅನ್ಯ ಭಾಷೆಯ ಕೃತಿಯೊಂದನ್ನು ಓದಿ ಮೆಚ್ಚಿ ಅನುಭವಿಸುವ ಸಂತಸದಂತೇ ಆ ಕೃತಿಯನ್ನು ನಮ್ಮ ಚೆಲುಕನ್ನಡ ನುಡಿಯಲ್ಲಿ ಅನುಸೃಷ್ಟಿಸಿ ಕನ್ನಡ ಓದುಗರೊಡನೆ ಆ ಸಿರಿಯನ್ನು ಹಂಚಿಕೊಳ್ಳುವ ಸಂತೃಪ್ತಿ, ಎಣೆಯಿಲ್ಲದ್ದು. ಈ ಅನುಸೃಷ್ಟಿಗೆ ಓದುಗರಿಂದ ಬರುವ ಪ್ರತಿಸ್ಪಂದನ ಕೊಡುವ ಸಾರ್ಥಕ್ಯದ ಭಾವ ಯಾವುದೇ ಸಿರಿ ಸಂಪತ್ತಿಗೂ ಮಿಗಿಲಾದದ್ದು.

ಪ್ರಕಟಣೆಯ ಹಾದಿಯಲ್ಲಿರುವ ನನ್ನ ಸುದೀರ್ಘ ಹೊಸ ಅನುವಾದ ಕೃತಿ, 'ದ ಫಾರ್ ಪೆವಿಲಿಯನ್ಸ್', ಅಪರಿಚಿತರನ್ನು ಪರಕೀಯರೆಂದು ಗಣಿಸದೆ ನಮ್ಮವರೆಂದೇ ಸ್ವೀಕರಿಸುವ ಕಲ್ಪನೆಯ ಸಾಮ್ರಾಜ್ಯವನ್ನೂ, ತಾಯಿ ಸೀತೆ ತಮ್ಮ ಮನೆಯಿಹುದೆಂದು ತೋರಿದ ಹಿಮಾಲಯ ಶಿಖರದ ತಾರಾಕಲಶವನ್ನೂ ಕಥಾನಾಯಕ ಆಶ್, ತನ್ನ ಪ್ರಿಯತಮೆ ಜೂಲಿಯೊಡನೆ ಅರಸುತ್ತಾ ಸಾಗುವಲ್ಲಿ ಕೊನೆಗೊಳ್ಳುತ್ತದೆ.

ನಮ್ಮವರು, ಪರರು ಎಂಬ ಭೇದಭಾವಗಳೆಲ್ಲ ಅಳಿದು, ಸುವಿಚಾರ ಜಲ ಹರಿದು, ಮಾನವೀಯ ಮೌಲ್ಯಗಳು ವೃದ್ಧಿಸುವ ಸಾಹಿತ್ಯದ ಬೆಳಕು ನಮ್ಮೆಲ್ಲರ ಬಾಳನ್ನು ಬೆಳಗಲಿ ಎಂಬುದೇ ಹೃದಯದ ಹಾರೈಕೆ.

●

ನಮ್ಮ ಭಾರತೀಯ ಸಂಸ್ಕೃತಿ

ನಮ್ಮ ಭಾರತೀಯ ಸಂಸ್ಕೃತಿಯು ಬಹಳ ಪುರಾತನವಾದುದು. ಪ್ರಪಂಚಕ್ಕೇ ಮಾದರಿಯಾಗಿಹ ಸಂಸ್ಕೃತಿ ನಮ್ಮದು. ಆದರೆ ಹಲವಾರು ಕಾರಣಗಳಿಂದ ಹಾಗೂ ವಿದೇಶಿಯರ ಆಗಮನದಿಂದ ಇತ್ತೀಚಿನವರ ಅಲಕ್ಷ್ಯದಿಂದ ನಮ್ಮ ಪವಿತ್ರ ಸಂಸ್ಕೃತಿ ಅಲ್ಲೋಲ ಕಲ್ಲೋಲವಾಗಿದೆ. ಆದರೆ ಇದರ ಬುನಾದಿ ಭದ್ರವಾಗಿರುವುದರಿಂದ ಹಾಗೂ ಸಂಸ್ಕೃತಿಯ ಮೆಚ್ಚುಗೆಯಿಂದಲೋ ಅಲ್ಪಸ್ವಲ್ಪ ಅಪಧ್ರಂಶವಾದರೂ ಅಜರಾಮರವಾಗಿ ಉಳಿದಿದೆ. ಇಂತಹ ಅಮೂಲ್ಯ ಸಂಸ್ಕೃತಿ ನಮ್ಮ ಭರತದೇಶದಲ್ಲಿದೆ ಎಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಇದು ಅಚ್ಚಳಿಯದೆ ಉಳಿಯಬೇಕಾದರೆ ನಮ್ಮ ಮಕ್ಕಳಿಗೆ ಇದ್ರ ಮಹತ್ವ ತಿಳಿದಿರಬೇಕು. ಕೂಲಂಕುಶವಾಗಿ ಅಲ್ಲದಿದ್ದರೂ ಸ್ವಲ್ಪವಾದರೂ ಮನವ ಮಾಡಿಸಬೇಕು.

ಪೌರಾಣಿಕ ಹಾಗೂ ಐತಿಹಾಸಿಕ ಕಥೆಗಳನ್ನು ರಸವತ್ತಾಗಿ ಬಣ್ಣಿಸಿ ಅವರ ಗಮನ ಸೆಳೆಯಬೇಕು. ಚಿಕ್ಕವರಿರುವಾಗಲೇ ಚಿಕ್ಕ ಚಿಕ್ಕ ಶ್ಲೋಕಗಳಿಂದ ಆರಂಭಿಸಿ ಮುಂದುವರಿಸಬೇಕು. ನಾವು ಚಿಕ್ಕವರಿರುವಾಗ ಕತ್ತಲಾಗುವ ಮೊದಲೇ ಕೈಕಾಲು ಮುಖ ತೊಳೆದು ಮಗ್ಗಿ (Table) ಮತ್ತು ಭಾರತೀಯ ತಿಂಗಳುಗಳು (ಮೇಷ, ವೃಷಭ) ಹಾಗೂ ಪಾಡ್ಯ, ಬಿದಿಗೆ ಮುಂತಾದುವುಗಳನ್ನು ಬಾಯಿಪಾಠ ಹೇಳಬೇಕಿತ್ತು ಹಾಗೂ ಹಿರಿಯರೆಲ್ಲರ ಕಾಲಿಗೆ ನಮಸ್ಕಾರ ಮಾಡಬೇಕಿತ್ತು. ಈಗಿನ ವೇಗದ ಯುಗದಲ್ಲಿಇದೆಲ್ಲಾ ಮಾಡಲಾಗದಿದ್ದರೂ ಚಿಕ್ಕ ಚಿಕ್ಕ ಶ್ಲೋಕಗಳನ್ನು ಹೇಳಿಕೊಂಡು ಹಿರಿಯರಿಗೆ ನಮಸ್ಕಾರ ಮಾಡುವಷ್ಟಾದರೂ ನಾವು ಒತ್ತಾಯ ಪೂರ್ವಕವಾಗಿ ಮಾಡಿಸಬೇಕು. ಗುರುಹಿರಿಯರಿಗೆ ಗೌರವ ಕೊಡುವಂತೆ ಮಾಡಬೇಕು. ಮಕ್ಕಳು ಶಾಲೆಯ ಶಿಕ್ಷಕರಿಗೆ ಬೇರೆಯೇ ಹೆಸರಿಟ್ಟು ತಮಾಶೆ ಮಾಡಿದಾಗ ಅವರನ್ನು ಗದರಿಸಿ ಎಚ್ಚರಿಸಬೇಕು. "ಗುರು ಬ್ರಹ್ಮ, ಗುರುರ್ವಿಷ್ಣು, ಗುರು ದೇವೋ ಮಹೇಶ್ವರಃ, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ" ಅರ್ಥ ಸಹಿತ ಮಕ್ಕಳಿಗೆ ಮನನ ಮಾಡಬೇಕು. ಏಳೆಂಟು ವರ್ಷದ ತನಕ ಮಕ್ಕಳು ನಮ್ಮ ಮಾತನ್ನು ಕೇಳುವರು. ನಂತರ ನಮ್ಮ ಮಾತು ಗೌಣ. ಈಗಿನ ವಾತಾವರಣ ಹಾಗೇ ಆಗಿದೆ. ಇದರಲ್ಲಿ ನಾವುಗಳು ಬಂಧಿಸಲ್ಪಟ್ಟೀದ್ದೇವೆ.

"ಆಧುನಿಕತ್ತೆಯ ಶಿಖರ ತಲುಪಿಹೆವು ನಾವಿಂದು
ಅವನತಿಯೆಡೆಗೆ ಸಾಗದಿರಿ ಎಂದೆದು".

– ಸವಿತಾ ರಾವ್

ಕಾನಡಾ ವಿಠಲ

✍ ಡಾ. ಬಿ. ಆರ್. ಮಂಜುನಾಥ್

ಕನ್ನಡದಲ್ಲಿ ಎರಡು ವ್ಯಂಜನಗಳು ಸೇರುವುದೇ ಇಲ್ಲ. ಹೀಗಾಗಿ "ಕೃಷ್ಣ" ಎಂಬ ಹೆಸರು "ಕಿಟ್ಟ" ಆಗುತ್ತದೆ. "ವಿಷ್ಣು" ಎಂಬ ಹೆಸರು "ವಿಟ್ಟ" ಆಗುತ್ತದೆ. ರಾಮಾನುಜಾಚಾರ್ಯರು ಹೊಯ್ಸಳ ರಾಜ್ಯಕ್ಕೆ ಬಂದಾಗ ಅಲ್ಲಿಯ ರಾಜ "ಬಿಟ್ಟಿದೇವ". ಈ ಬಿಟ್ಟಿದೇವ ನಿಗೆ "ವಿಷ್ಣುವರ್ಧನ" ಎಂದು ಆಚಾರ್ಯರು ಹೆಸರಿಡುತ್ತಾರೆ. ಇದು ಹತ್ತನೆಯ ಶತಮಾನ, ಶ್ರೀ ವೈಷ್ಣವ ಸಂಧ ಸ್ಥಾಪನೆ ಇದಕ್ಕೆ ನೂರು ವರ್ಷದ ಮೊದಲು ಆಳ್ವಾರ್‌ಗಳು ಮಾಡಿದ್ದು. ಅದಕ್ಕೆ ಮುನ್ನ ವೈಷ್ಣವ ಧರ್ಮ ಇರಲೇ ಇಲ್ಲ. ಆಗ ಹೊಯ್ಸಳ ರಾಜ್ಯ ಇಂದಿನ ಕಾವೇರಿ ತೀರದಿಂದ ಕೃಷ್ಣಾ ನದಿಯ ತೀರದವರೆಗೆ ಇದ್ದು, ಬಿಟ್ಟಿದೇವ ತನ್ನ ರಾಜ್ಯದ ಎಲ್ಲೆಡೆಯಲ್ಲಿ 'ವಿಠಲ' ನ ಗುಡಿಗಳನ್ನು ಕಟ್ಟಿಸಿದ. ಅಂತೆ "ಪಂಡರಾಪುರ" ಚಂದ್ರಭಾಗ ನದಿಯ ದಡದಲ್ಲಿ ಇದ್ದು, ಅಲ್ಲಿಯ ದೇವ "ಪಾಂಡುರಂಗ ವಿಠಲ"ನಾದ. ಬಣ್ಣ ಕಪ್ಪೇ ಆದರೂ ಶ್ರೀಹರಿ ಬೆಳಗುತ್ತಿರುವುದರಿಂದ ಅವನಿಗೆ "ಪಾಂಡುರಂಗ" ಎಂದಾರೆ "ಬೆಳ್ಳಗಿರುವವನು" ಎಂದಾಯಿತು.

ಹೊಯ್ಸಳ ರಾಜ್ಯದ ಉತ್ತರಕ್ಕೆ ದೇವಗಿರಿ ಯಾದವರ ರಾಜ್ಯವಿದ್ದು ಅವರು ಸಂಸ್ಕೃತದ ಅಭಿಮಾನಿಗಳು ಅವರ ಆಸ್ಥಾನದಲ್ಲಿಯೇ ಇದ್ದ ಕನ್ನಡದ ವಿದ್ವಾಂಸ, ಶ್ರೀವಿಜಯ, ಭಾಗವತ ಪುರಾಣವನ್ನು ಬರೆದ. ರಾಜ ಸಂಸ್ಕೃತ ಪ್ರಿಯನಾಗಿದ್ದರಿಂದ ಅವನ ಆಸ್ಥಾನಿಕರು ಹಾಗೂ ಬ್ರಾಹ್ಮಣ ಪ್ರಜೆಗಳು ಸಂಸ್ಕೃತ ಪ್ರಾಕೃತದಲ್ಲಿಯೇ ಮಾತನಾಡಲು ಮೊದಲು ಮಾಡಿದ್ದರು. ರಾಷ್ಟ್ರಕೂಟರ ಸಾಮ್ರಾಜ್ಯ ಕಾವೇರಿಯಿಂದ ಗೋದಾವರಿಯವರೆಗೆ ಇದ್ದು ಅಲ್ಲಿಯ ಮೂಲ ಭಾಷೆ ಕನ್ನಡವೇ ಆಗಿತ್ತು. ಕನ್ನಡವೆಂದರೆ "ಕರುನಾಡು". "ಕರು" ಎಂದರೆ "ಎತ್ತರ ಹಾಗು ಮಹಾ" ಎಂದಾಗುತ್ತದೆ. ಹೀಗಾಗಿ "ಕರುನಾಡು" ಪ್ರಾಕೃತದಲ್ಲಿ "ಮಹಾರಾಷ್ಟ್ರ" ವಾಯಿತು.

ಹತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನಕ್ಕೆ ಬಂದಾಗ ಮಧ್ವಾಚಾರ್ಯ ತತ್ವಸಿದ್ಧಾಂತದಿಂದ ವೈಷ್ಣವ ಧರ್ಮ ಹಾಗೂ ದಾಸ ಪಂಥ ಮೊದಲಾಯಿತು. ಅಲ್ಲಿಂದ ದಾಸರು ಉತ್ತರಕ್ಕೆ ಹೋಗಿ ದಾಸಪಂಥವನ್ನು ಸಾರಿದರು. ಈ ಭಕ್ತಿಪಂಥ ಉತ್ತರದಲ್ಲಿ ಬೆಳಗಿದ್ದು, ಸಂತ ಪಂಥದ ಬಹು ಮಂದಿಯಿಂದ ಸಂತ ಜ್ಞಾನೇಶ್ವರರ ಸಮಯ ಹದಿಮೂರನೆಯ ಶತಮಾನದ ಕೊನೆ. ಅವರ ತಂದೆ ಓಂ ಕುಲಕರ್ಣಿ ಬ್ರಾಹ್ಮಣ. ಆಗ ಮರಾಠಿ ಭಾಷೆ ಕೇವಲ ಕೆಲವು ಮಂದಿಯ ಮಾತಾಗಿದ್ದು, ಎಲ್ಲ ಜನರ ಭಾಷೆಯಾಗಿರಲಿಲ್ಲ. ಹಾಗೆ ಆಗಿದ್ದುದು, ಹದಿನೆಂಟನೆಯ ಶತಮಾನದ ಪೇಶ್ವೆಯವರ ಕಾಲದಲ್ಲಿ ಹೀಗಾಗಿ ಅದೇನೂ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳಿರಲಿಲ್ಲ. ಆದರೆ ಸಂತ ಜ್ಞಾನೇಶ್ವರ ಪಂಡಿತನಾಗಿದ್ದು, ಅವನಿಗೆ 'ವಿಠಲ' ಎಲ್ಲಿಂದ ಬಂದವನು ಎಂದು ತಿಳಿದಿತ್ತು. ಹೀಗಾಗಿ ಅವನು 'ಕಾನಡಾ ವಿಠಲ ತೂ ಕರ್ನಾಟಾಕು" ಎಂದು ಸಾರಿದ. ಅವನು ಬರೆದ ಹಳೆಯ ಮರಾಠಿಯ ಗ್ರಂಥಗಳಲ್ಲಿಯೇ ಅನೇಕ ಕನ್ನಡ ಶಬ್ದಗಳಿವೆ.

'ವಿಠಲ' ಎಂದರೆ 'ಇಟ್ಟಿಗೆಯ ಮೇಲೆ ನಿಂತವನು ಎಂಬುದು ಕಟ್ಟುಕಥೆ. ಎಲ್ಲಾ ದೇವರ ಮೂರ್ತಿಗಳೂ ಒಂದು ಕಲ್ಲಿನ ಇಟ್ಟಿಗೆಯ ಮೇಲೆ ನಿಂತಿರುತ್ತವೆ.

ಪೇಶ್ವೆಗಳು ಬ್ರಾಹ್ಮಣರಾದ್ದರಿಂದ ಭಾರತದ ಎಲ್ಲೆಡೆಯಿಂದ ಬ್ರಾಹ್ಮಣರು ಇಲ್ಲಿ ಆಶ್ರಯವನ್ನು ಪಡೆಯಲು ಓಡಿ ಬಂದರು. ಪಂಜಾಬ್‌ನಿಂದ ಬಂದ ಬ್ರಾಹ್ಮಣರು "ಸೌರಾಷ್ಟ್ರ" ಬನಾರಸ್ ನಿಂದ ಬಂದ ಪಾಂಡೆಯರು "ಬಾರ್ ಪಾಂಡೆ" ತಮಿಳುನಾಡಿನಿಂಡ ಬಂದವರು "ದ್ರಾವಿಡ್" ಆಂಧ್ರದಿಂದ ಬಂದವರು "ತೆಲಂಗ್" ಅಂತೆಯೇ ಮೊದಲು ಕನ್ನಡ ನುಡಿಯುತ್ತಿದ್ದವರು "ಕಾನಡೆ" ಆದರು. ಅವರೆಲ್ಲರೂ ರಾಜಾಶ್ರಯಕ್ಕಾಗಿ ಮರಾಠಿಯನ್ನೇ ತಮ್ಮ ಭಾಷೆಯಾಗಿ ಮಾಡಿಕೊಂಡರು.

ಮೂರನೆಯ ಮೈಸೂರಿನ ಯುದ್ಧವಾದ ಮೇಲೆ ಕನ್ನಡ ನಾಡು, ಮರಾಠಿ, ನಿಜಾಮ್ ಹಾಗೂ ಬ್ರಿಟಿಷರ ನಡುವೆ ಹರಿದು ಹಂಚಿ ಹೋಗಿ ಕನ್ನಡದ ಮಂದಿ ಮರಾಠಿಯನ್ನೇ ಮಾತನಾಡಲು ಮೊದಲು ಮಾಡಿದ್ದರಿಂದ ನೃಪತುಂಗನ ಹಾಗೂ ಚಾಲುಕ್ಯರ ಕಾಲದಲ್ಲಿ ಗೋದಾವರಿಯವರೆಗಿದ್ದ ಕನ್ನಡ ನಾಡು, ಕುಗ್ಗಿ, ಕೃಷ್ಣನದಿಯ ದಕ್ಷಿಣಕ್ಕೆ ಜರುಗಿತು. ಹೀಗೆ ಪಂಡರಾಪುರ ಫಂಡರ್ ಪುರ ಆಯಿತು. ಸೊನ್ನಲಾಪುರ ಸೊಲ್ಲಾಪುರವಾಯಿತು.

ವಿಜಯನಗರ ಸಾಮ್ರಾಜ್ಯದಲ್ಲಿ, ವೈಷ್ಣವಧರ್ಮ ಹೆಚ್ಚಾಗಿ ಬೆಳಗಿತು. ಆಗ ಪುರಂದರದಾಸರು ಫಂಡರಾಪುರದ ಮಗ್ಗುಲಿನಿಂದ ಬಂದವರು. ಅದಕ್ಕೇ ಅವರು 'ಪುರಂದರ ವಿಠಲ' ಎಂಬ ದೇವನನ್ನೇ ಕುರಿತು ಭಜಿಸಿದರು. ಕನಕದಾಸರ ಕಾಗಿನೆಲೆಯೂ ಉತ್ತರದಲ್ಲಿಯೇ ಇದೆ. ಇಂದು ರಾಜ್ಯವಿಂಗಡನೆ ಭಾಷೆಯ ಆಧಾರದ ಮೇಲೆ ಆಗಿದ್ದರೂ ಕೂಡ ಈ ಪುರಂದರ ವಿಠಲ ನಮ್ಮೆಲ್ಲರನ್ನೂ ಕೂಡಿಸಿದ್ದಾನೆ.

ಇದಕಾಗಿಯೇ ಈಗ ನಮ್ಮ ನೂರನೆಯ ವರ್ಷದಲ್ಲಿ ನಾವು 'ಕಾನಡಾ ವಿಠಲ' ನೆಂಬ ಸಂಗೀತ ಕಾರ್ಯಕ್ರಮದಲ್ಲಿ ಕನ್ನಡ ಮರಾಠಿಯ ಭಜನೆಗಳನ್ನು ಹಾಡಲು ನಿರ್ಧರಿಸಿದ್ದೇವೆ. ಈ ಪುರಂದರ ವಿಠಲನ ಮಹಿಮೆಯನ್ನು ನಾವು ಎಲ್ಲೆಡೆಯೂ ಸಾರುತ್ತಿದ್ದೇವೆ.

–ಪುರಂದರ ವಿಠಲ.... ಪುರಂದರ ವಿಠಲ.....

ಕನ್ನಡ ನಾಟಕೋತ್ಸವ

ಶುಕ್ರವಾರ, 27.02.2026 ಸಂಜೆ 6.30ಕ್ಕೆ

ನಾಟಕ : ಈಡಿಪಸ್

ನಿರ್ದೇಶನ: **ಶಶಿಧರ್‌ಭಾರಿಘಾಟ್** ರಚನೆ : **ಪಿ. ಲಂಕೇಶ್**

ಶನಿವಾರ, 28.02.2026 ಸಂಜೆ 6.30ಕ್ಕೆ

ನಾಟಕ : ಕಾಲ ಜ್ಞಾನಿ ಕನಕ

ಮರು ನಿರ್ದೇಶನ : **ಟಿಟಿ. ರಘು** ನಿರ್ದೇಶನ: **ಸಿ. ಜಿ. ಕೆ** ರಚನೆ: **ಕಿ. ರಂ. ನಾಗರಾಜ**

ರವಿವಾರ, 01.03.2026

ನಾಟಕ : ಮೌನಿ

ಕಥೆ: **ಡಾ. ಯು. ಆನಂತ ಮೂರ್ತಿ** ನಿರ್ದೇಶನ : **ಡಾ. ಕೆ. ವಿ. ನಾಗರಾಜ ಮೂರ್ತಿ**

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ, 393, ಭಾವು ದಾಜಿ ರಸ್ತೆ, ಮಾಟುಂಗ – 400 019

ಕುಲಾಲ ಸಂಘ ಮುಂಬಯಿ: ಮಂಗಳೂರಲ್ಲಿ ಕುಲಾಲ ಭವನ ಲೋಕರ್ಪಣೆ

ಕುಲಾಲ ಸಂಘ ಮುಂಬಯಿ ಹದಿನೈದು ಕೋಟಿಗೂ ಅಧಿಕ ಮೊತ್ತದಲ್ಲಿ ಸಮಾಜ ಬಾಂಧವರ ಹಾಗೂ ದಾನಿಗಳ ಸಹಾಯದಿಂದ ಮಂಗಳೂರಿನ ಮಂಗಳಾದೇವಿ ಸಮೀಪ ನಿರ್ಮಿಸಿದ, ಕುಲಾಲ ಭವನ ಉದ್ಘಾಟನಾ ಸಮಾರಂಭವು ನವೆಂಬರ್ 23, 2025ರಂದು ಅಧ್ಯಕ್ಷ ರಘು ಎ. ಮೂಲ್ಯರ ಅಧ್ಯಕ್ಷತೆಯಲ್ಲಿ ಗೌರವ ಅಧ್ಯಕ್ಷರಾದ ದೇವದಾಸ್ ಎಲ್. ಕುಲಾಲ್ ಅವರ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ನಡೆದಿತ್ತು.

ಈ ಸಂದರ್ಭದಲ್ಲಿ ಶ್ರೀಮತಿ ಸುಮಿತ್ರಾ ರಾಜು ಸಾಲಿಯನ್ ಸಭಾಂಗಣ, ಶ್ರೀಮತಿ ಯಶೋಧಾ ಬಾಬು ಸಾಲ್ಯಾನ್ ಬಂಟ್ವಾಳ ವೇದಿಕೆ, ಶ್ರೀಮತಿ ಸರಸ್ವತಿ ವಿಶ್ವನಾಥ್ ಬಂಗೇರಾ ಕುಲಾಯಿ (ಬಾಲ್ಕನಿ), ಶ್ರೀಮತಿ ನಮ್ರತಾ ಜಗದೀಶ್ ಬಂಜನ್ ಬ್ಯಾಂಕ್ವೆಟ್ ಹಾಲ್, ಶ್ರೀಮತಿ ಸಾವಿತ್ರಿ ಪಿ. ಕೆ. ಸಾಲ್ಯಾನ್ ವೇದಿಕೆ, ಶ್ರೀಮತಿ ವಸಂತಿ ಸದಾಶಿವ ಬಂಜನ್ ಆಡಳಿತ ಕಚೇರಿ ಉದ್ಘಾಟನೆಗೊಂಡಿದೆ.

ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ, ಒಡಿಯೂರು ಮತ್ತು ಕರ್ಮಯೋಗಿ ಶ್ರೀ ಶ್ರೀ ಮೋಹನ್‌ದಾಸ ಪರಮಹಂಸ ಸ್ವಾಮೀಜಿ, ಕೇಂದ್ರ ಸಚಿವ ಶ್ರೀಪಾದ ನಾಯಕ್, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಂಗಳೂರಿನ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ. ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ, ನಡುಬೆಟ್ಟು ಶ್ರೀ ಉದ್ಧವ ರೌದ್ರನಾಥೇಶ್ವರ ದೇವಸ್ಥಾನದ ಧರ್ಮದರ್ಶಿ ಡಾ. ರವಿ ಎನ್., ಮಂಗಳಾದೇವಿ ದೇವಸ್ಥಾನದ ಟ್ರಸ್ಟಿ ಅರುಣ್‌ಕುಮಾರ್ ಐತಾಳ್, ಮಾರ್ಗನ್ಸ್ ಗೇಟ್ ಸೇಂಟ್ ರಿಚರ್ಡ್ ಧರ್ಮ ಕ್ರೋಸ್ತಾ, ಮಾಜಿ ಸಚಿವ ಬಿ. ರಮಾನಾಥ ರೈ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ಎಂ.ರೈ, ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ ಶೆಟ್ಟಿ, ಮುಂಬಯಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸೂರ್ಯಕಾಂತ ಜಯ ಸುವರ್ಣ, ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ ಸ್ಥಾಪಕ ಜಯಕೃಷ್ಣ ಎ. ಶೆಟ್ಟಿ, ಬಂಟರ ಸಂಘ ಮುಂಬಯಿಯ ಎಸ್. ಎಂ. ಶೆಟ್ಟಿ ಶಿಕ್ಷಣ ಸಮೂಹ ಸಂಸ್ಥೆಗಳ ಕಾರ್ಯಾಧ್ಯಕ್ಷ ಮುಂಡ್ಕೂರು ರತ್ನಾಕರ ಶೆಟ್ಟಿ, ಮುಂಬಯಿಯ ಉದ್ಯಮಿ, ಸಮಾಜ ಸೇವಕ ರವೀಂದ್ರನಾಥ್ ಭಂಡಾರಿ, ದಕ ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಸಂಘದ ಅಧ್ಯಕ್ಷ ಮಯೂರ್ ಉಳ್ಳಾಲ್, ನಾಸಿಕ್ ಉದ್ಯಮಿಗಳಾದ ಸಂಜೀವ ಕೆ. ಬಂಗೇರ, ರಮಾನಂದ ಬಂಗೇರ, ಕೆಪಿಸಿಸಿ ಸದಸ್ಯ ಪೃಥ್ವಿರಾಜ್ ಎಡಪದವು, ಬಿಲ್ಲವ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನ ಕಾರ್ಯಾಧ್ಯಕ್ಷ ಎನ್. ಟಿ. ಪೂಜಾರಿ, ದ.ಕ. ಜಿಲ್ಲಾ ಮಾಜಿ ಉಪಾಧ್ಯಕ್ಷೆ ಕಸ್ತೂರಿ ಪಂಜ, ಬೆಂಗಳೂರು ಕುಲಾಲ ಸಂಘದ ಅಧ್ಯಕ್ಷ ದಿವಾಕರ ಮೂಲ್ಯ, ಕಾಸರಗೋಡು ಜಿಲ್ಲಾ ಕುಲಾಲ ಸಂಘದ ಅಧ್ಯಕ್ಷ ರವೀಂದ್ರ ಮನ್ನಿಪ್ಪಾಡಿ, ಬರ್ಕೆ ಫ್ರೆಂಡ್ಸ್ ಅಧ್ಯಕ್ಷ ಯಜೇಶ್ ಬರ್ಕೆ, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದು ಶುಭ ಹಾರೈಸಿದರು.

ಮುಂಬರುವ ಕಾರ್ಯಕ್ರಮಗಳು

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay

Centenary Year (1926 - 2026)

100 Years

Presents

MUSIC PROGRAMME

Kanada Vittalu

by

Pandit Upendra Bhat

(Senior Discple of Bharat Ratna Pandit Bhimsen Joshi)

Chief Guest : Honourable Sri Ashish Shelar

(Minister of Cultural Affairs of Maharashtra)

on **Saturday, January 17, 2026 at 6.30 p.m.**

Venue:

Mysore Association's Auditorium
393, Bhau Daji Road, Matunga, Mumbai - 400 019.

All are cordially invited

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay



ಗುರುವಾರ 22, 2026 ಸಂಜೆ 5.30ಕ್ಕೆ

ಮಾಘಿ ಗಣಪತಿ ಪೂಜೆ ಹಾಗೂ ಸತ್ಯನಾರಾಯಣ ಪೂಜೆ

ಪ್ರಸಾದ ವಿನಿಯೋಗ

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ, 393, ಭಾವು ದಾಜಿ ರಸ್ತೆ, ಮಾಟುಂಗ – 400 019



Republic Day Celebration

FLAG HOISTING CEREMONY

Monday 26th January 2026 at 10.00 a.m

Venue: The Mysore Association, Mumbai, 393, Bhau Daji Road, Matunga, Mumbai -400 019

All Are Cordially Invited



ರವಿವಾರ, ಫೆಬ್ರುವರಿ 15, 2026 ಸಂಜೆ 5.30ಕ್ಕೆ

ಮಹಾಶಿವರಾತ್ರಿ ಪೂಜೆ ಮತ್ತು ಭಜನೆ

ಪ್ರಸಾದ ವಿನಿಯೋಗ

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ, 393, ಭಾವು ದಾಜಿ ರಸ್ತೆ, ಮಾಟುಂಗ – 400 019

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077